ತಾಲ್ಲೂಕಿನಲ್ಲಿಯೂ ಕೂಡ ಕೆಲವು ಪ್ರದೇಶದಲ್ಲಿ ಅತಿವೃಷ್ಟಿ ಆಗಿರುವುದು. ಇದರಿಂದ ಸುಮಾರು ೩೬ ಗ್ರಾಮಗಳಲ್ಲಿ ಸ್ವಲ್ಪ ಹಾನಿ ಉಂಟಾಗಿದೆ. ಸುಮಾರು ೪೦ ಮನೆಗಳು ಪೂರ್ತಿ ಕುಸಿದಿದ್ದು ಸುಮಾರು ೮೩೬ ಮನೆಗಳಿಗೆ ಭಾಗಶಃ ನಷ್ಟ ಉಂಟಾಗಿದೆ.

ಸ್ಥಳೀಯ ಅಧಿಕಾರಿಗಳ ವರದಿಯಂತೆ ಈ ರೀತಿ ಮನೆಗಳಿಗೆ ಹಾನಿ ಉಂಟಾಗಿರುವುದು ಕಂಡುಬರುತ್ತದೆ. ಇತರೆ ಹಾನಿ ಅಥವಾ ನಷ್ಟದ ಬಗ್ಗೆ ವರದಿ ಇರುವುದಿಲ್ಲ. ತೊಂದರೆ ಒಳಗಾದವರಿಗೆ ದಿನಾಂಕ ೮-೬-೧೯೮೮ರ ಪ್ರಕಾರ ಪರಿಷ್ಕೃತ ಸರ್ಕಾರಿ ಆಜ್ಞೆಯಂತೆ ಪರಿಹಾರ ನೀಡಲಾಗುತ್ತಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮನೆಗಳಿಗೆ ಆಗಿರುವ ನಷ್ಟದ ಅಂದಾಜು ಸುಮಾರು ರೂ. ೪.೧೮ ಲಕ್ಷ. ನಿಯಮಾನುಸಾರ ಸುಮಾರು ರೂ. ೧.೧೦ ಲಕ್ಷ ಪರಿಹಾರ ನೀಡಬೇಕಾಗುವುದು. ಈಗಾಗಲೇ ರೂ. ೨೫.೦೦೦ ನೊಂದವರಿಗೆ ವಿತರಿಸಲಾಗಿದೆ. ಉಳಿದವರಿಗೆ ಪರಿಹಾರ ನೀಡುವ ಹಂತದಲ್ಲಿ ಇರುವುದು.

೬. ಶಿವಮೊಗ್ಗ ಕ್ಷೇತ್ರದ ಹಳ್ಳಿಯ ದಸ್ತಗಿರ್ ಮತ್ತು ಯೂಸೂಫ್, ಎನ್ನುವ ಕೃಷಿ ಕಾರ್ಮಿಕರ ಮೇಲೆ ಅರಣ್ಯ ಅಧಿಕಾರಿಗಳು ಗುಂಡು ಹಾರಿಸಿರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನ ಮೂಕದಾರ ಕ್ಷೇತ್ರದ ಹಳ್ಳಿಯಲ್ಲಿ ವಾಸವಾಗಿರುವಂತಹ ಯೂಸೂಫ್ ಮತ್ತು ದಸ್ತಗಿರ್ ಎಂಬ ಮಧ್ಯವಯಸ್ಸಿನ ಇಬ್ಬರು ಕೃಷಿ ಕಾರ್ಮಿಕರು ಸಕ್ಕರೆಬೈಲ್ ಅರಣ್ಯಕ್ಕೆ ಒಣಗಿಬಿದ್ದ ಸೌದೆಯನ್ನು ತರುವುದಕ್ಕೆ ಹೋದಾಗ ಅಲ್ಲಿದ್ದ ಹಿರಿಯ ಅರಣ್ಯಾಧಿಕಾರಿಗಳು ಅವರ ಮೇಲೆ ಗುಂಡನ್ನು ಹಾರಿಸಿದ್ದಾರೆ. ಇದರಿಂದ ತುಂಬಾ ತೀವ್ರತರವಾದ ಗಾಯಗಳು ಅವರಿಗೆ ಆಗಿವೆ. ಕೂಡಲೇ ಅವರಿಗೆ ಚಿಕಿತ್ಸೆ ಮಾಡಿಸಲು ಶಿವಮೊಗ್ಗದಲ್ಲಿರುವ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ಆದರೆ ಆಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದ ಕಾರಣ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ನನಗೆ ತಂತಿ ಸಮಾಚಾರ ಬಂದಿದೆ. ಆಕಸ್ಮಾತ್ ದಾವಣಗೆರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದಿದ್ದರೆ ತಕ್ಷಣವೇ ಸರ್ಕಾರದವರು ಒಬ್ಬ ಉನ್ನತಾಧಿಕಾರಿಯ ಜೊತೆಯಲ್ಲಿ ಅವರನ್ನು ಬೆಂಗಳೂರಿಗೆ ಕರೆಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ಇದರಲ್ಲಿ ಅರಣ್ಯಾಧಿಕಾರಿಗಳದ್ದು ತಪ್ಪಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸಿ ಅವರ ಮೇಲೆ ಕ್ರಮ ಕೈಕೊಳ್ಳಬೇಕು ಮತ್ತು ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆಯಾಗಬೇಕು ಹಾಗೂ ಅವರಿಗೆ ಪರಿಹಾರಕ್ಕಾಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಟಿಲಿಗ್ರಾಂ ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗೂ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡುವುದರ ಜೊತೆಗೆ ಫೈರಿಂಗ್‌ನಲ್ಲಿ ಗಾಯಗೊಂಡಿರುವ ಇಬ್ಬರಿಗೆ ದಾವಣಗೆರೆಯಲ್ಲಿ ಸೂಕ್ತ ಚಿಕಿತ್ಸೆ ಸಿಗದಿದ್ದರೆ ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಸೂಕ್ತ ಚಿಕಿತ್ಸೆ ಕೊಡಿಸುವ ಬಗ್ಗೆ ಸರ್ಕಾರ ತಕ್ಷಣವೇ ಕ್ರಮ ಕೈಕೊಳ್ಳುತ್ತದೆಂದು ಹೇಳುತ್ತೇನೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ.

೭. ದಾವಣಗೆರೆ ಮತ್ತು ಇತರೆ ಕಡೆಗಳಲ್ಲಿ ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿ ಹೋಗಿರುವುದರಿಂದ ಕಾರ್ಮಿಕರು ಬೀದಿಪಾಲಾಗಿರುವುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಾನು ಈ ದಿನ ಬೆಳಿಗ್ಗೆ ೮ ಗಂಟೆಗೆ ಬಂದೆ. ಈಗ ರಾತ್ರಿ ೮ ಗಂಟೆಯಾಗಿದೆ. ಒಟ್ಟಿನಲ್ಲಿ ಕಾರ್ಮಿಕರ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿತು ಎಂಬ ತೃಪ್ತಿಯಿಂದ ನಾನು ತಪುಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಲ್ಲಿ ಅನೇಕ ಸಂದರ್ಭಗಳಲ್ಲಿ ಕಾರ್ಮಿಕರ ಬಗ್ಗೆ ಮಾತನಾಡುವಾಗ ನಾನು ಮಾತನಾಡಿದ್ದು ಕಡಿತಕ್ಕೆ ಹೋಗುವುದಿಲ್ಲ

ವೆಂದು ತಾವು ಹೇಳುತ್ತೀರಿ. ಆದರೆ ಇವೊತ್ತು ನಾನು ಮಾತನಾಡಿದ್ದು ಕಡಿತಕ್ಕೆ ಹೋಗುತ್ತದೆ. ಆದೇ ನನಗೆ ಸಂತೋಷ. ಕರ್ನಾಟಕ ರಾಜ್ಯದಲ್ಲಿ ಸುಮಾರು ೩೪ ಟೆಕ್ಸ್‌ಟೈಲ್ ಮಿಲ್‌ಗಳಿವೆ. ಇವುಗಳ ಪೈಕಿ ೧೨ ಮಿಲ್‌ಗಳು ಮುಚ್ಚಿವೆ. ಈ ೧೨ ಟೆಕ್ಸ್‌ಟೈಲ್ ಮಿಲ್‌ಗಳ ಪೈಕಿ ಖಾಸಗಿಯವರದ್ದು ೬, ಸಹಕಾರಿ ಕ್ಷೇತ್ರಕ್ಕೆ ಸೇರಿದ ೪ ಹಾಗೂ ಎನ್. ಟಿ. ಸಿ.ಗೆ ಸೇರಿದ ೨ ಮಿಲ್‌ಗಳು ಇಂದು ಮುಚ್ಚಿಹೋಗಿವೆ. ದಾವಣಗೆರೆಯಲ್ಲಿಯೇ ಐದು ಗಿರಣಿಗಳು ಮುಚ್ಚಿ ಹೋಗಿವೆ. ಇದರಲ್ಲಿ ಗಣೇಶ ಟೆಕ್ಸ್‌ಟೈಲ್ ಮಿಲ್ ಒಂದು. ಇದರಲ್ಲಿ ೨೫ ಸಾವಿರ ಸ್ಪಿಂಡಲ್ಸ್ ಇದ್ದು ೮೦೦ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಅದೇರೀತಿ ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್‌ನಲ್ಲಿ ೮೦೦ ಕೆಲಸಗಾರರು ಇದ್ದರು. ಇಲ್ಲಿಯೂ ಸಹ ೨೫ ಸಾವಿರ ಸ್ಪಿಂಡಲ್ಸ್ ಇವೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಈ ನೋಟೀಸ್‌ನಲ್ಲಿ ನಿಮ್ಮ ಹೆಸರು ಸಹ ಇದೆ. ಅದ್ದರಿಂದ ತಮಗೂ ಸಹ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ತಾವು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಮಾನ್ಯ ವೆಂಕಟರಾಮಯ್ಯನವರಲ್ಲಿ ಕೇಳಿಕೊಳ್ಳುವುದಿಷ್ಟೆ ಇವೊತ್ತಿನ ಅಜೆಂಡಾ ಪ್ರಕಾರ ಎಲ್ಲ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಾಗಿ ತಾವು ಹೇಳುತ್ತಿದ್ದೀರಿ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ಬಿಲ್‌ನ್ನು ಈ ಸಭೆಯಲ್ಲಿ ಮಂಡಿಸಿ ಅದನ್ನು ಪಾಸ್ ಮಾಡುವ ಆಸಕ್ತಿ ಸರ್ಕಾರಕ್ಕೆ ಇರಬೇಕಾಗುತ್ತದೆ. ನಮಗೆಲ್ಲಾ ಅರ್ಥವಾದಮಟ್ಟಿಗೆ ಈ ಬಗ್ಗೆ ತಾವು ಕೊಡಬೇಕಾದ ಭರವಸೆಯನ್ನು ಖಂಡಿತವಾಗಿಯೂ ಕೊಟ್ಟಿದ್ದೀರಿ. ಅದ್ದರಿಂದ ಹಿರಿಯ ಸದಸ್ಯರಾದ ತಾವು ತಮ್ಮ ಸ್ಥಾನಕ್ಕೆ ಬರುವುದು ಒಳ್ಳೆಯದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಸಹ ಈ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ವೆಂಕಟರಾಮಯ್ಯನವರಲ್ಲಿ ವಿಸಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ಇಲ್ಲಿ ಕೇಳಿ, ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ನಿಮಗೆ ರೈತರ ಬಗ್ಗೆ ಕಳಕಳಿ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಿಮ್ಮಷ್ಟೇ ಸರ್ಕಾರಕ್ಕೆ ಆ ವರ್ಗದ ಜನಗಳ ಬಗ್ಗೆ ಕಾಳಜಿ ಇದೆ, ಅನುಕಂಪ ಇದೆ. ದಯಮಾಡಿ ತಮ್ಮ ಸ್ಥಾನಕ್ಕೆ ನಡೆಯಿರಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸೇನ್ ದೇ ಒಂದೊಂದು ಸಾರಿ ಸೈಲೆ ದೇ ಎಂತಲೂ ಕೇಳಿಸುತ್ತಾ ಇದೆ ಆದುದರಿಂದ ನಿಮಗೆ ನಾವು ಹೇಳುತ್ತಾ ಇರುವುದು, ದಯಮಾಡಿ ಬನ್ನಿ ಎಂದು.

ಶ್ರೀ ಆರ್. ವೆಂಕಟರಾಮಯ್ಯ.—ಪ್ರಾಮಿಸ್ ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಮ್ಮ ಸ್ಥಾನಕ್ಕೆ ನಡೆಯಿರಿ, ಬಸ್ ಸ್ಟ್ಯಾಂಡ್ ಮಾಡಿಸೋಣ.

(ಮಾನ್ಯ ಸದಸ್ಯರಾದ ಆರ್ ವೆಂಕಟರಾಮಯ್ಯನವರು ತಮ್ಮ ಸ್ಥಾನಕ್ಕೆ ತೆರಳಿದರು)

† ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳುತ್ತಿದ್ದೆ. ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್‌ನಲ್ಲಿ ೨೫ ಸಾವಿರ ಸ್ಪಿಂಡಲ್ ಮತ್ತು ೮೦೦ ಜನ, ಚಿಗಟೇರಿಯದ್ದು ೧೨ ಸಾವಿರ ಸ್ಪಿಂಡಲ್ ಮತ್ತು ೪೦೦ ಜನ. ಶ್ರೀ ಆಂಜನೇಯ ಕಾಟನ್ ಮಿಲ್‌ನಲ್ಲಿ ಸುಮಾರು ೧೭ ಸಾವಿರ ಸ್ಪಿಂಡಲ್ ಮತ್ತು ೫೦೦ ಜನ. ಶ್ರೀ ಶಂಕರ ಟೆಕ್ಸ್‌ಟೈಲ್ ಮಿಲ್‌ನಲ್ಲಿ ೨೫ ಸಾವಿರ ಸ್ಪಿಂಡಲ್ ಮತ್ತು ೮೦೦ ಜನ ಕೆಲಸಗಾರರು ಹೀಗೆ ದಾವಣಗೆರೆ ಒಂದರಲ್ಲೇ ೩೩೦೦ ಜನ ಇವತ್ತು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಬಳ್ಳಾರಿ ಸಹಕಾರಿ ನೂಲಿನ ಗಿರಣಿಯಲ್ಲಿ ೨೫ ಸಾವಿರ ಸ್ಪಿಂಡಲ್ ಮತ್ತು ೬೦೦ ಜನ. ಬಿಜಾಪುರ ಸಹಕಾರಿ ನೂಲಿನ ಗಿರಣಿ ೨೫ ಸಾವಿರ ಸ್ಪಿಂಡಲ್ ೮೦೦ ಜನ. ರಾಯಚೂರು ಸಹಕಾರಿ ನೂಲಿನ ಗಿರಣಿ ೨೫ ಸಾವಿರ ಸ್ಪಿಂಡಲ್ ೮೦೦ ಜನ. ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ ೨೫ ಸಾವಿರ ಸ್ಪಿಂಡಲ್ ೮೦೦ ಜನ. ಮಿನರ್ವಮಿಲ್‌ನಲ್ಲಿ ಸುಮಾರು ೫೦ ಸಾವಿರ ಸ್ಪಿಂಡಲ್ ಮತ್ತು ೫೦೦ ಮಗ್ಗಗಳಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು ೩೦೦೦ ಜನ. ನಿರುದ್ಯೋಗಿಗಳಾಗಿದ್ದಾರೆ. ಆಮೇಲೆ ಕೆ. ಆರ್ ಮಿಲ್ ಮೈಸೂರು. ಸುಮಾರು ೪ ವರ್ಷ ಆಯಿತು. ಅಲ್ಲೂ ಕೂಡ ಒಟ್ಟು ೫೦ ಸಾವಿರ ಸ್ಪಿಂಡಲ್ ಸುಮಾರು ೫೦೦ ಮಗ್ಗಗಳು ಒಟ್ಟು ೩೦೦೦ ಜನ ಕೆಲಸಗಾರರು ನಿರುದ್ಯೋಗಿ

ಗಳಾಗಿದ್ದಾರೆ. ಎಂ.ಎಸ್.ಕೆ. ಮಿಲ್ ಗುಲ್ಬರ್ಗಾ ಅಲ್ಲೂ ಕೂಡ ಹೆಚ್ಚೂ ಕಡಿಮೆ ಸುಮಾರು ಎರಡೂವರೆ ಸಾವಿರ ಜನ, ೫೧ ಸಾವಿರ ಸ್ಪಿಂಡಲ್ಸ್ ಎಂದು ತಿಳಿದುಕೊಂಡಿದ್ದೇನೆ. ಒಟ್ಟು ಎಲ್ಲಾ ಸೇರಿ ೧೫ ಸಾವಿರ ಜನ ಕೆಲಸಗಾರರು ಈ ರಾಜ್ಯದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಹತ್ತಿ ಗಿರಣಿಗಳಲ್ಲಿ ಅಥವಾ ಬಟ್ಟೆ ತಯಾರು ಮಾಡತಕ್ಕ ಗಿರಣಿಗಳಲ್ಲಿ ಕೆಲಸ ಮಾಡತಕ್ಕವರು. ಈ ೧೫ ಸಾವಿರ ಜನರನ್ನು ಅವಲಂಬಿಸಿರತಕ್ಕ ಜನ ಬೇರೆ ಇದ್ದಾರೆ. ಒಂದು ಸಾಕು, ಎರಡುಬೇಕು ಎಂಬ ಘೋಷಣೆ ಏನಿದೆ ಆ ಲೆಕ್ಕಕ್ಕೆ ತೆಗೆದುಕೊಂಡರೆ ಗ ಡ ಜೊತೆ ೨ ಮಕ್ಕಳು, ಒಂದು ಕುಟುಂಬಕ್ಕೆ ೫ ಜನರ ಲೆಕ್ಕ ಇಟ್ಟು ಕೊಂಡರೂ ಸಹ ಇವರೇ ಸುಮಾರು ಒಂದು ಲಕ್ಷಕ್ಕೆ ಹತ್ತಿರ ಬರುತ್ತಾರೆ. ಈ ಒಂದು ಲಕ್ಷ ಜನರಿಗೆ ದವಸಧಾನ್ಯ ಅಂಗಡಿ, ಸಣ್ಣ ವ್ಯಾಪಾರ ಮಾಡತಕ್ಕವರ ಲೆಕ್ಕ ತೆಗೆದುಕೊಂಡರೆ ಒಂದು ೧೦ ಸಾವಿರ ಜನ ಆಗುತ್ತಾರೆ. ಒಂದು ಕಡೆ ಒಂದು ಲಕ್ಷ ಜನರಿಗೆ ಉದ್ಯೋಗ ಇಲ್ಲ ಊಟ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಅವರು ತೊಳಲಾಡುತ್ತಾ ಇದ್ದಾರೆ. ಅದರ ಜೊತೆಗೆ ಈ ಮಿಲ್ಲುಗಳಲ್ಲಿ ಕೆಲಸ ಮಾಡತಕ್ಕಂಥ ಜನರ ಸಮಸ್ಯೆ ಇದೆ. ಈ ಮಿಲ್ಲುಗಳಿಗೆ ಪುನಶ್ಚೈತನ್ಯ ಬೇಕಾಗಿರತಕ್ಕಂಥ ಕಚ್ಚಾಪದಾರ್ಥ ಅರಳಿ. ಬಂದ್ ಆಗಿರತಕ್ಕಂಥ ಎಲ್ಲಾ ಮಿಲ್ಲುಗಳಲ್ಲಿ ನಿಂತಿರತಕ್ಕ ಸ್ಪಿಂಡಲ್ಸ್ ೩ ಲಕ್ಷ ೩೦ ಸಾವಿರ. ಇವತ್ತು ಕೋ ಆಪರೇಟೀವ್ ಟೆಕ್ಸ್‌ಟೈಲ್ಸ್ ಮಿಲ್‌ಗಳನ್ನು ತಾವು ಏನಾದರೂ ಪ್ರಾರಂಭ ಮಾಡುವುದಕ್ಕೆ ಪ್ರಯತ್ನಪಟ್ಟರೆ ೨೫ ಸಾವಿರ ಸ್ಪಿಂಡಲ್ಸ್ ಮಿಲ್ಲನ್ನು ಕಟ್ಟುವುದಕ್ಕೆ ೧೧ ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡುತ್ತೀರಿ. ೧೧ ಕೋಟಿ ಖರ್ಚು ಮಾಡಿದರೆ ೨೫ ಸಾವಿರ ಸ್ಪಿಂಡಲ್ ಮಿಲ್ ಆಗುತ್ತದೆ. ಇವತ್ತು ೩ ಲಕ್ಷ ೩೦ ಸಾವಿರ ಸ್ಪಿಂಡಲ್ಸ್ ಹಾಗೇ ಕೆಲಸವಿಲ್ಲದೆ ನಿಂತಿದೆ, ಇವನ್ನು ಚಾಲೂ ಮಾಡುವುದಕ್ಕೆ ಕಾರ್ಮಿಕರು ಅನೇಕ ರೀತಿಯಾದಂಥ ಪ್ರಯತ್ನಗಳನ್ನು ಮಾಡಿದ್ದಾರೆ. ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ಸರ್ಕಾರಕ್ಕೆ ಒತ್ತಾಯ ಮಾಡಿ ಪತ್ರವಿಗಳನ್ನು ಕೊಟ್ಟಿದ್ದಾರೆ. ಎಲ್ಲಾ ರೀತಿಯಾದಂಥ ಪ್ರಯತ್ನ ಮಾಡಿದ್ದಾರೆ, ಆದರೆ ಯಾವ ಪ್ರಯತ್ನವೂ ಇಲ್ಲಿಯವರೆಗೆ ಫಲಕಾರಿಯಾಗಿಲ್ಲ. ಅವರು ಕೊನೆಗೆ ಎಲ್ಲಿಯವರೆಗೂ ಹೋಗಿದ್ದಾರೆ ಅಂದರೆ ಗಣೇಶ ಟೆಕ್ಸ್‌ಟೈಲ್ ಮಿಲ್ ಪ್ರಾರಂಭ ಮಾಡಬೇಕು ಅಂತ ಹೇಳಿ ಅವರು ಬಿ.ಐ.ಎಫ್.ಆರ್ ಎಂದು ಒಂದು ಸಂಸ್ಥೆ ಡೆಲ್ಲಿಯಲ್ಲಿದೆ. ಕಾಯಿಲೆ ಮಿಲ್‌ಗಳು ಅವರಿಗೆ ಬರೆದುಕೊಂಡರೆ ಅವರು ಕೆಲವು ಸಹಾಯವನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಮತ್ತು ಹಣಕಾಸು ಸಂಸ್ಥೆಗಳಿಗೆ ಆದೇಶ ಕೊಡುತ್ತಾರೆ ಅವರು ಅಲ್ಲಿ ಹೋಗಿದ್ದಾರೆ. ಈ ಮಿಲ್ ಉಳಿಯಬೇಕು, ಕೆಲಸಗಾರರಿಗೆ ಕೆಲಸ ಸಿಗಬೇಕು ಅಂತ ಹೇಳಿ ಕೆಲಸಗಾರರ ಹಿತವನ್ನೂ ಬಲಿ ಕೊಟ್ಟು ಒಂದು ತೀರ್ಮಾನವನ್ನು ಕೂಡ ಮಾಡಿಕೊಂಡಿದ್ದಾರೆ. ಅದು ಆಗಿ ಈಗಾಗಲೇ ಒಂದು ತಿಂಗಳಾಗಿದೆ. ಆದರೂ ಈ ಕೈಗಾರಿಕೆ ಇನ್ನೂ ಪ್ರಾರಂಭ ಆಗಿಲ್ಲ ಕಾರ್ಮಿಕರೇನೋ ಹಠದಲ್ಲಿದ್ದಾರೆ, ಕೈಗಾರಿಕೆ ನಿಂತುಹೋಗಿದೆ. ಲಾಕ್ಔಟ್ ಆಗಿದೆ. ಇದೆಲ್ಲವನ್ನೂ ತೀರ್ಮಾನಮಾಡಿಕೊಂಡು ಕೈಗಾರಿಕೆ ಉಳಿಯಬೇಕು ಎಂಬ ದೃಷ್ಟಿಯಿಂದ ಇವತ್ತು ಕಾರ್ಮಿಕರ ಹಿತವನ್ನು ಬಲಿ ಕೊಟ್ಟರೂ ಕೂಡ ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ, ಏನು ಮಾಡಿದ್ದಾರೆ, ಏನು ಮಾಡಬೇಕು, ಏತಕ್ಕೆ ಮಾಡಿಲ್ಲ ಅದರ ಬಗ್ಗೆ ನಮಗಂತೂ ಒಂದೂ ಗೊತ್ತಾಗುತ್ತಿಲ್ಲ ಮಾನ್ಯ ಹೊಸ ಮುಖ್ಯಮಂತ್ರಿಗಳು ಹುಬ್ಬಳ್ಳಿಗೆ ಬಂದಾಗ ಅಲ್ಲಿ ಹೋಗಿ ನೋಡಿದೆ. ಚಿತ್ರದುರ್ಗಕ್ಕೆ ಬಂದಾಗ ಅಲ್ಲಿ ಹೋಗಿ ನೋಡಿದೆ. ಇಲ್ಲಿ ಬಂದಮೇಲೆ ಇಲ್ಲಿ ನೋಡಿದೆ. ಕೈಗಾರಿಕಾ ಮಂತ್ರಿಗಳಿಗೆ ಹೇಳಿದೆ. ಪ್ರತಿಯೊಬ್ಬರನ್ನು ಬೆಂದಲ್ಲಿ ಒಂದು ದಿವಸ ನೋಡುತ್ತಲೇ ಇದ್ದೇವೆ. ಕೇಳುತ್ತಲೇ ಇದ್ದೇವೆ. ಇವತ್ತು ಅದಕ್ಕಾಗಿ ಸರ್ಕಾರ ಎಷ್ಟು ಕೋಟಿ ರೂಪಾಯಿಗಳನ್ನೂ ಖರ್ಚು ಮಾಡಬೇಕಾಗಿಲ್ಲ ಅವರಿಗೆ ವಿದ್ಯುಚ್ಛಕ್ತಿ ಹೆಚ್ಚು ಕೊಡಿಸಬೇಕೆ. ನಿಮ್ಮ ಮಿಲ್ ಜೀವಂತವಾಗಿ ನಡೆಸಿ ಎಂದು ಹೇಳಬೇಕು. ಅಥವಾ ಅವರು ಕೊಡಬೇಕಾದಂಥದ್ದು ಬಾಕಿ ಇದ್ದರೆ ಅದನ್ನು ನಿಧಾನವಾಗಿ ಕೊಡಲಿ ಎಂದು ಹೇಳಬೇಕು. ಅಥವಾ ಬ್ಯಾಂಕಿನವರು ಸಾಲ ಕೊಡುವವರಿದ್ದರೆ ಸಾಲ ಕೊಡಲಿ, ಪರ್ವಾಗಿಲ್ಲ. ೧೦ ಕೋಟಿ ೨೦ ಕೋಟಿ ಆಸ್ತಿ ಇದೆ ಅವರಿಗೆ. ಅವರು ಎಲ್ಲೂ ಓಡಿ ಹೋಗುವುದಿಲ್ಲ, ಅವರು ಇದೇ ರಾಜ್ಯದಲ್ಲಿ ಹುಟ್ಟಿರತಕ್ಕವರು. ಇದೇ ರಾಜ್ಯದಲ್ಲಿ ಬೆಳೆದಿರತಕ್ಕವರು. ಸುಮಾರು ೨೫.೩೦ ವರ್ಷಗಳಿಂದ ಕೈಗಾರಿಕೆಯನ್ನು ನಡೆಸಿರತಕ್ಕವರು, ಅವರಿಗೆ ಸ್ವಲ್ಪ ಸಹಾಯ ಮಾಡಿ ಎಂದು ಹೇಳಿದರೆ ಕಾರ್ಮಿಕರೂ ಕೆಲಸಕ್ಕೆ ಹೋಗುವುದಕ್ಕಾಗುತ್ತದೆ ಉತ್ಪಾದನೆಯೂ ಹೆಚ್ಚಾಗುತ್ತದೆ ಮತ್ತು ಅವರೂ ಸಹ ಚೆನ್ನಾಗಿ ಜೀವನವನ್ನೂ ನಡೆಸುವುದಕ್ಕಾಗುತ್ತದೆ. ಜೊತೆಗೆ ರೈತರು ಬೆಳೆದಂಥ ಬೆಳೆಗೆ ಒಳ್ಳೆಯ ಬೆಲೆ ಕೊಡುವುದಕ್ಕೂ ಸಾಧ್ಯವಾಗುತ್ತದೆ. ಈ ಹದಿಮೂರು ಮಿಲ್‌ಗಳು ನಿಂತಿರುವುದರಿಂದ ಸುಮಾರು ಒಂದು ಲಕ್ಷ ಬೇಲ್‌ಗಿಂತಲೂ

ಹೆಚ್ಚು ಆರಳಿ ಇವತ್ತು ನೂಲು ಆಗದಂತೆ ಆಗಿದೆ. ಇವತ್ತು ಒಂದು ಲಕ್ಷದಷ್ಟು ಬೇಲ್ ಆರಳಿಯನ್ನು ಕೇಳುವವರು ಇಲ್ಲದಿದ್ದರೆ ರೈತರು ಬೆಳೆದಂಥ ಬೆಳೆಗೆ ಯಾವರೀತಿ ಒಳ್ಳೆಯ ಬೆಲೆಯನ್ನು ಕೊಡುತ್ತೀರಿ? ಒಂದು ಕಡೆ ಹೇಳುತ್ತೀರಿ. ರೈತರಿಗೆ ಬೆಲೆ ಜಾಸ್ತಿ ಸಿಗಬೇಕು, ರೈತರ ಉದ್ಧಾರ ಆಗಬೇಕು ಎಂದು. ರೈತರ ಉದ್ಧಾರವಾಗಬೇಕಾದರೆ ಈ ಕೈಗಾರಿಕೆಗಳು ನಡೆಯಬೇಕು. ಆವನು ಬೆಳೆದಂಥ ಬೆಳೆ ಇವತ್ತು ಉಪಯೋಗ ಆಗಬೇಕು. ಅದರ ಜೊತೆಯಲ್ಲಿ ಇವತ್ತು ಸರ್ಕಾರಕ್ಕೆ ಎಷ್ಟು ಲುಕ್ಸಾನು ಆಗುತ್ತಿದೆ? ಇವತ್ತು ಕೈಗಾರಿಕೆಯಿಂದ ಬರತಕ್ಕಂಥ ಇನ್‌ಕಮ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, ಅಥವಾ ಎಕ್ಸೈಸ್ ಡ್ಯೂಟಿ ಇಲ್ಲದೆ ಕೇಂದ್ರ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ, ರಾಜ್ಯ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ ಇಷ್ಟೆಲ್ಲಾ ಆದರೂ ಕೂಡ ಒಂದು ಕಡೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತೀರಿ. ಬೆಳಿಗ್ಗೆ ಯಾರೋ ಮಾತನಾಡುತ್ತಾ ಹೇಳಿದ್ದರು, ಏನೆಂದರೆ ನೂರು ರೂಪಾಯಿ ಚೆಕ್ ಕೂಡ ಆನರ್ ಆಗಿಲ್ಲವೆಂದು. ಈ ಪರಿಸ್ಥಿತಿಯಲ್ಲಿ ಸರ್ಕಾರ ಇದೆ. ಇವತ್ತು ಆದಾಯ ಬರತಕ್ಕಂಥ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ ಈ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆದಾಯ ಬರುತ್ತದೆ. ಸ್ವಾಮಿ ಇವೆಲ್ಲವನ್ನೂ ಯೋಚನೆ ಮಾಡುವಂಥ ಸರ್ಕಾರ ಇವತ್ತು ನಮ್ಮಲ್ಲಿ ಇದೆಯಾ? ಅದೇ ಇವತ್ತು ನಮಗೆ ಬಂದಿರುವ ಸಮಸ್ಯೆ. ಅಥವಾ ಎಲ್ಲವನ್ನೂ ಯೋಚನೆ ಮಾಡುವಂಥ, ಪರಿಹಾರ ಮಾರ್ಗವನ್ನು ಕಂಡುಹಿಡಿಯತಕ್ಕಂಥ ಅಧಿಕಾರಿಗಳು ನಮ್ಮಲ್ಲಿ ಇದ್ದಾರಾ? ಇದನ್ನೂ ಕೂಡ ಇವತ್ತು ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ಕೈಗಾರಿಕಾ ಮಂತ್ರಿಗಳು ಆಗಿಂದಾಗ್ಗೆ ಹೇಳುತ್ತಿರುತ್ತಾರೆ. ಏನೆಂದರೆ

ಸರ್ಕಾರ ಗ್ಯಾರೇಜ್ ಅಲ್ಲ ಎಂದು ನಮಗೆ ಗೊತ್ತು: ಮತ್ತೆ ಸರ್ಕಾರ ಆಂದರೆ ಏನು? ಸರ್ಕಾರ ಏಕಿದೆ ಎಂದು ನಾವು ಕೇಳುತ್ತೇವೆ. ಸರ್ಕಾರದ ಜವಾಬ್ದಾರಿ ಏನು ಎಂದು ನಾವು ಕೇಳುತ್ತೇವೆ. ಈ ಸಹಕಾರಿ ನೂಲಿನ ಗಿರಣಿಗಳಿಗೆ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಆವಲ್ಲಾ ಹಳೆಯ ಮಿಲ್ಲುಗಳು ಅಲ್ಲಿ, ಹೊಸ ಮಿಲ್ಲುಗಳು. ಈ ಹೊಸ ಮಿಲ್ಲುಗಳು ಇವೊತ್ತು ಪಾಡಿಟ್ಟಿವೆ. ಕೈಗಾರಿಕೆಗಳು ಒಂದು ಸಂದರ್ಭದಲ್ಲಿ ಲಾಭವನ್ನು ಗಳಿಸಬಹುದು, ಇನ್ನೊಂದು ಸಂದರ್ಭದಲ್ಲಿ ಲಕ್ಸಾನು ಆಗಬಹುದು. ಆದರಿಗೆ ಲುಕ್ಸಾನು ಆದ ಸಂದರ್ಭದಲ್ಲಿ ಆವರಿಗೆ ಸ್ವಲ್ಪ ಸಹಾಯ ಮಾಡಿ ಕೈಗಾರಿಕೆಗಳನ್ನು ಮುಂದುವರಿಕೊಂಡು ಹೋಗಕ್ಕೆ ಒಂದು ಪ್ರಯತ್ನ ಮಾಡಿದರೆ ಇವೊತ್ತು ಕೈಗಾರಿಕೆಗಳು ಬೆಳೆಯುತ್ತವೆ. ಒಂದು ಕಡೆ ನಾವು ಕೈಗಾರಿಕೆಗಳನ್ನು ಬೆಳೆಸುತ್ತೇವೆ, ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತೇವೆ ಎಂದು ಹೇಳಿ, ಅಮೆರಿಕಾದಲ್ಲಿರುವವರಿಗೆ ನೀವು ಬನ್ನಿ, ಲಂಡನ್‌ನಲ್ಲಿರುವವರಿಗೆ ನೀವು ಬನ್ನಿ, ಜಪಾನ್‌ನಲ್ಲಿರುವವರಿಗೆ ನೀವು ಬನ್ನಿ, ಜರ್ಮನಿಯಲ್ಲಿರುವವರಿಗೆ ನೀವು ಬನ್ನಿ ಎಂದು ಹೇಳುತ್ತಾ ಇದ್ದರೆ ಇಲ್ಲಿರುವವರು ವಿಷ ಕುಡಿಯಬೇಕೇ? ಇಲ್ಲಿರತಕ್ಕ ಕೈಗಾರಿಕೆಗಳನ್ನು ಇವರಿಗೆ ನಡೆಸಲಿಕ್ಕಾಗುವುದಿಲ್ಲ, ಆದರೆ ಬೇರೆ ದೇಶದಲ್ಲಿರತಕ್ಕವರನ್ನು ಕರೆಯತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆವರೇನಾದರೂ ಇಲ್ಲಿಗೆ ಬಂದು ಒಂದು ಸಾರಿ ಈ ರಾಜ್ಯವನ್ನೋಡಿದರೆ ಸಾಕು, ಏನಪ್ಪ ಇದು ಇಂತಹ ರಾಜ್ಯ ಎಂದು ಖಂಡಿತವಾಗಿಯೂ ಈ ಕಡೆ ತಲೆ ಇಟ್ಟು ಆವರು ಮಲಗುವುದಿಲ್ಲ. ಈಗತಾನೇ ನನಗೆ ಒಂದು ಪತ್ರ ಬಂದಿದೆ. ಮೈಸೂರು ಐಡಿಯಲ್ ಜಿನ್ನಾದ ಕೆಲಸ ಸಹ ನಿಂತು ಹೋಗಿದೆ. ಈ ರಾಜ್ಯದ ಕೈಗಾರಿಕೆಗಳೆಲ್ಲಾ ನಿಂತು ಹೋಗುತ್ತಿವೆ. ಅದಕ್ಕೆ ಹಲವಾರು ಕಾರಣಗಳು ಇರಬಹುದು. ಆ ಕಾರಣಗಳು ಏನು ಎಂದು ತಿಳಿದುಕೊಂಡು, ಆ ಕಾರಣಕ್ಕೆ ಸರಿಯಾದಂಥ ವ್ಯವಸ್ಥೆ, ಅನುಕೂಲತೆ ಮಾಡಿ ಆ ಕೈಗಾರಿಕೆಗಳನ್ನು ನಡೆಸುವುದಕ್ಕೆ ಬೇಕಾದಂಥ ಅನುಕೂಲತೆಗಳನ್ನು ಮಾಡಿಕೊಡಬೇಕಾದಂದು ಸರ್ಕಾರದ ಆದ್ಯ ಕರ್ತವ್ಯ. ನಮ್ಮ ಮಂತ್ರಿಗಳು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳು ಬರುತ್ತಿವೆ ಎಂದು ಹೇಳಿದರು, ಯಾವುದು ಸ್ವಾಮಿ ಒಂದು ಸಾವಿರ ಕೈಗಾರಿಕೆಗಳು? ಮನೆಯಲ್ಲಿ ರೊಟ್ಟಿ ಸುಡುತ್ತಾರಲ್ಲ, ಅವುಗಳನ್ನು ಕೂಡ ಕೈಗಾರಿಕೆಗಳು ಎಂದು ಹೇಳುತ್ತೀರಾ ಇವೊತ್ತು ಅಹಮದಾಬಾದ್ ಮತ್ತು ಬಾಂಬೆಯಲ್ಲಿರುವ ಮಿಲ್‌ಗಳು ಸಹ ನಿಂತುಹೋಗಿವೆ ಎಂದು ಹೇಳಬಹುದು ಆದರೆ ನೂರು ವರ್ಷಗಳ ಕಾಲ ಕೆಲಸ ಮಾಡಿರತಕ್ಕ ಮಿಲ್ಲುಗಳು ದೊಡ್ಡ ನಗರ, ಪಟ್ಟಣದ ಮಧ್ಯೆ ಜಲ್ಯಾಷನ್ ಆಗತ್ತದೆಂದು ಹೇಳಿ ಅಲ್ಲಿ ನಿಲ್ಲಿಸಿ ಬೇರೆ ಕಡೆಗೆ ವರ್ಗ ಮಾಡಿದರು. ಕರ್ನಾಟಕದಲ್ಲಿ ಆ ತರಹ ಇಲ್ಲ. ಬಹಳ ಹಳೆಯದು ಅಂದರೆ ಬಿನ್ನಿಮಿಲ್ಲು ಮಾತ್ರ ಇನ್ನು ಬೇರೆ ಮಿಲ್ಲುಗಳೆಲ್ಲಾ ಹೊಸ ಮಿಲ್ಲುಗಳು. ಇಲ್ಲಿ ಬಂದ್ ಆಗಿರತಕ್ಕಂಥ ಹಳೆಯ ಮಿಲ್ಲುಗಳು ಅಂದರೆ ಮಿನರ್ವ ಮಿಲ್ಲು, ಕೆ. ಆರ್. ಮಿಲ್ಲು ಇನ್ನು ಎಲ್ಲಾ ಹೊಸ ಮಿಲ್ಲುಗಳು. ಕೆಲವು ಹಳೆಯ ಮಿಲ್ಲುಗಳಾದರೂ ಸಹ ಅಲ್ಲಿ ಹೊಸ ಮಿಷಿನರಿ ಹಾಕಿದ್ದಾರೆ. ಈಗ ನಿಂತುಹೋಗಿರತಕ್ಕ

ಕೈಗಾರಿಕೆಗಳನ್ನು ನಡೆಸಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ಕೈಗಾರಿಕೆ ಇಲಾಖೆ ಏನು ಪ್ರಯತ್ನ ಮಾಡಿದೆ. ಇವೊತ್ತು ಸಾಧ್ಯವಾದಷ್ಟುಮಟ್ಟಿಗೆ ಕಾರ್ಮಿಕ ಇಲಾಖೆ ಪ್ರಯತ್ನ ಮಾಡುತ್ತಿದೆ. ಆದರೆ ಕಾರ್ಮಿಕ ಇಲಾಖೆಯನ್ನು ಕೇಳುವವರು ಯಾರು ? ಕಾರ್ಮಿಕ ಇಲಾಖೆಯವರು ಏನಾದರೂ ನೋಟೀಸ್ ಕಳುಹಿಸಿದರೆ ಯಾವ ಮಾಲೀಕರು ಮಾತುಕತೆಗೆ ಬರುವುದಿಲ್ಲ. ನಮ್ಮ ದಾವಣಗೆರೆ ಗಣೇಶ ಮಿಲ್ ಮಾಲೀಕರಿಗೆ ನಾಲ್ಕು ಸಾರಿ ನೋಟೀಸ್ ಕಳುಹಿಸಿದರೂ ಬರಲಿಲ್ಲ, ನಮಗೆ ಬೇರೆ ಕೆಲಸ ಇದೆ ಎಂದು ಹೇಳುತ್ತಾರೆ. ಅದೇ ಒಬ್ಬ ಪೋಲೀಸ್ ಅಧಿಕಾರಿಯಾರಾದರೂ ಕರೆದರೆ ತಕ್ಷಣ ಅವರು ಏನಾದರೂ ನೋಟೀಸ್ ತರುತ್ತಾರೆಂದು ಹೆದರಿಕೊಂಡು ಬರುತ್ತಾರೆ. ಅದೇ ಒಬ್ಬ ಕೈಗಾರಿಕೆ ಇಲಾಖೆ ಕಮೀಷನರ್ ಅವರು ನೋಟೀಸ್ ಕಳುಹಿಸಿದರೆ ಯಾರೂ ಕೂಡ ಬರುವುದಿಲ್ಲ. ಈ ರೀತಿಯಲ್ಲಿ ನಿಮ್ಮ ಕಾರ್ಮಿಕ ಇಲಾಖೆ ಇದೆ. ಅವರನ್ನು ಕರೆದು ಅವರಿಗೆ ಬೇಕಾದ ಅನುಕೂಲಗಳನ್ನೆಲ್ಲಾ ಒದಗಿಸಿ ಕೊಡಬೇಕಾದ್ದು ಕರ್ತವ್ಯ. ಹೊಸ ಕೈಗಾರಿಕೆಗಳಿಗೆ ಲೈಸೆನ್ಸ್‌ನ್ನು ಕೊಡತಕ್ಕದ್ದು ಮಾತ್ರವಲ್ಲ. ಹಳೆಯ ಕೈಗಾರಿಕೆಗಳಿಗೆ ಏನು ಅನುಕೂಲಗಳು ಬೇಕು, ಅವು ಏತಕ್ಕೆ ನಿಂತಿವೆ, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವೇ, ಇಲ್ಲವೇ, ಮುಂತಾದ ವಿಚಾರಗಳನ್ನೆಲ್ಲಾ ಯೋಚನೆ ಮಾಡಿ ಅದಕ್ಕೆ ಸೂಕ್ತ ಪರಿಹಾರ ಮತ್ತು ಅನುಕೂಲಗಳನ್ನು ಒದಗಿಸಿಕೊಡಬೇಕು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಕೈಗಾರಿಕೆಗಳು ನಿಲ್ಲುವುದರಿಂದ ರೈತರಿಗೆ, ಕಾರ್ಮಿಕರಿಗೆ ತೊಂದರೆಗಳಾಗುತ್ತವೆ ಈ ಕೈಗಾರಿಕೆಗಳು ನಿಂತಿರುವುದರಿಂದ ಸುಮಾರು ಮೂರೂವರೆ ಸಾವಿರ ಜನ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ. ಅಂದಮೇಲೆ ಅವರು ಹೇಗೆ ತಮ್ಮ ಜೀವನವನ್ನು ಮಾಡಬೇಕು, ಅವರು ಹೇಗೆ ತಮ್ಮ ಸಂಸಾರಗಳನ್ನು ನಡೆಸಬೇಕು. ಅವರಿಗೆ ಇರತಕ್ಕ ಹೆಂಡತಿ ಮಕ್ಕಳನ್ನು ಏನು ಮಾಡಬೇಕು. ಅವರಿಗೆ ಹೊರಗಡೆ ಎಲ್ಲಿಯೂ ಕೆಲಸವೇ ಸಿಕ್ಕುವುದಿಲ್ಲ. ಆತ ಊರು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಅವೇ ಊರಿನಲ್ಲಿದ್ದುಕೊಂಡು ಹೇಗೆ ಜೀವನ ಮಾಡಬೇಕು ? ಅನೇಕ ಕಡೆಗಳಲ್ಲಿ ಕಾರ್ಮಿಕರು ಕೆಲಸವಿಲ್ಲದೆ ವಿಷವನ್ನು ಕುಡಿದು, ಉರುಳನ್ನು ಹಾಕಿಕೊಂಡು ಸತ್ತಿದ್ದಾರೆ. ಬಾವಿಗೆ ಬಿದ್ದು ಸತ್ತಿದ್ದಾರೆ. ಇಂಥ ಕೆಲವು ಪ್ರಕರಣಗಳಿಗೆ ಸಂಬಂಧಪಟ್ಟಂತೆ ನಾನು ಮಾಜಿ ಮುಖ್ಯ ಮಂತ್ರಿಗಳಿಗೆ ಡೆತ್ ಸರ್ಟಿಫಿಕೇಟನ್ನು ಕೊಟ್ಟು ಸ್ವಾಮಿ, ಈ ರೀತಿ ಇಂಥ ಕಾರ್ಮಿಕ ಉರುಳು ಹಾಕಿ ಕೊಂಡು ಸತ್ತಿದ್ದಾನೆ, ಇಂಥ ಕಾರ್ಮಿಕ ವಿಷ ಕುಡಿದು ಸತ್ತಿದ್ದಾನೆ, ಅವನ ಸಂಸಾರಕ್ಕೆ ಯಾರೂ ದಿಕ್ಕಿಲ್ಲ ಆದ್ದರಿಂದ ಆ ಸಂಸಾರಕ್ಕೆ ಏನಾದರೂ ಪರಿಹಾರವನ್ನು ಕೊಡಿ ಎಂದು ಕೇಳಿಕೊಂಡೆ. ಆದರೆ ಅವರು ಪರಿಹಾರವನ್ನು ಕೊಡುವುದಿರಲಿ, ಒಂದು ಪತ್ರವನ್ನೂ ಕೂಡ ಮಾನವೀಯತೆಯಿಂದ ಬರೆಯಲಿಲ್ಲ.

ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ನಿಂತಾಗ ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಪರಿಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಇಂಥ ಸಮಸ್ಯೆಗಳು ಉದ್ಭವ ಆದಾಗ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಒಂದು ಸಾರಿ ೩೧ ದಿನಗಳ ಕಾಲ ಬಳ್ಳಾರಿ ಜೈಲಿನಲ್ಲಿದ್ದೆ, ಆದ ಕೂಡ ಕಾರ್ಮಿಕರಿಗೋಸ್ಕರ. ಆದರೆ ಬೇರೆ ಕಾರಣ ಕ್ಕಾಗಿ ಅಲ್ಲ ನಿಂತ ಕೈಗಾರಿಕೆ ಪುನರಾರಂಭವಾಗಬೇಕು, ಕಾರ್ಮಿಕರು ಕೆಲಸಕ್ಕೆ ಹೋಗಬೇಕು, ಅವರ ಜೀವನ ನಡೆಯಬೇಕು, ಎಂಬ ಉದ್ದೇಶದಿಂದ, ಸ್ವಾಮಿ, ಈ ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯನ್ನು ಮಾಡಬೇಕು, ಚಳುವಳಿಗಳನ್ನು ಮಾಡಬೇಕು. ಆದರೆ ಇವು ಯಾವುದಕ್ಕೂ ನಮಗೆ ಪರಿಹಾರ ಸಿಕ್ಕದಿದ್ದರೆ ಆಗ ನಾವೇನು ಮಾಡಬೇಕು ? ತಾವು ಹೇಳಬಹುದು, ನಿವೇನೂ ಮಾಡಬೇಡಿ ವಿಷ ಕುಡಿಯಿರಿ ಅಂತ, ಅಥವಾ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಿ ಎಂದು ಹೇಳಬಹುದು, ನಾನು ಈ ಮಾತನ್ನು ಬಹಳ ನೊಂದು, ಹೊಟ್ಟೆ ಉರಿದು, ಸಂಕಟದಿಂದ ಹೇಳುತ್ತಿದ್ದೇನೆ. ಸ್ವಾಮಿ, ಕಾರ್ಮಿಕರಿಗೆ ಸಂಬಳ ಕೊಡುವಾಗ ನಾಲ್ಕು ದಿವಸ ತಡವಾಗಿ ಕೊಟ್ಟರೆ ಅವರಿಗೆ ಕಷ್ಟವಾಗುತ್ತದೆ, ಅಂಥಾದ್ದರಲ್ಲಿ ಕಾರ್ಖಾನೆಯನ್ನೇ ಮುಚ್ಚಿದರೆ ಅವರು ಹೇಗೆ ಜೀವನ ಮಾಡಬೇಕು. ೧ ವರ್ಷದಿಂದ ಅವರಿಗೆ ಸಂಬಳ ಇಲ್ಲ, ಕೆಲವರ ತಂದೆತಾಯಿಗಳು ಕಾಯಿಲೆ ಬಿದ್ದಿರುತ್ತಾರೆ, ಮಕ್ಕಳಿಗೆ ಕಾಯಿಲೆ ಇರುತ್ತದೆ. ಅಂಥ ಸಂದರ್ಭದಲ್ಲಿ ಅವರು ಏನು ಮಾಡಬೇಕು ? ಇ.ಎಸ್.ಐ.ಗೆ ಹೋದರೆ ಅವರು ಔಷಧಿಯನ್ನು ಕೊಡುವುದಿಲ್ಲ. ನೀವು ದುಡ್ಡು ಕೊಡುತ್ತಿಲ್ಲ. ಆದ್ದರಿಂದ ನಿಮಗೆ ಔಷಧಿ ಕೊಡುವುದಿಲ್ಲ ಅಂತ ಅವರ ಫೈಲನ್ನು ಕಟ್ಟಿ ಇಡುತ್ತಾರೆ. ಅವರ ಮನೆಯಲ್ಲಿ ಅಷ್ಟೊಂದು ಜನ ಕಾಯಿಲೆ ಇರು

ತ್ತಾರೆ, ನೀವಾದರೂ ಅವರಿಗೆ ಪೇಳಿ ಔಷಧಿಯನ್ನು ಕೊಡಿಸುತ್ತೀರಾ ? ಅವರು ಸಾಯದಂತೆ ನೋಡಿಕೊಳ್ಳಿ ಎಂದು ಇ.ಎಸ್.ಐ ನವರಿಗೇನಾದರೂ ಹೇಳುತ್ತೀರಾ ? ನಿಮ್ಮ ಮಾತನ್ನು ಇ.ಎಸ್.ಐ ನವರು ಸಹ ಕೇಳುವುದಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಾರ್ಮಿಕರ ಪರಿಸ್ಥಿತಿ ಬಹಳ ಹೀನಸ್ಥಿತಿಯಲ್ಲಿದೆ. ಏನಾದರೂ ತಲೆನೋವು ಬಂತು ಅಂದರೆ ೧೦ ಪೈಸೆಯನ್ನು ಕೊಟ್ಟು ಒಂದು ಗುಳಿಗೆಯನ್ನೂ ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಕಾಸಿರುವುದಿಲ್ಲ. ಅಂಥ ಒಂದು ಪರಿಸ್ಥಿತಿ ಕಾರ್ಮಿಕರದ್ದು ಇದೆ.

ಆದ್ದರಿಂದ ಈ ಒಂದು ಪರಿಸ್ಥಿತಿಯಲ್ಲಿ ಆ ಜನ ಬಹಳ ತೊಂದರೆಯಲ್ಲಿದ್ದಾರೆ. ಮತ್ತೆ ಇದರ ಜೊತೆಯಲ್ಲಿ ಈ ವರ್ಷ ಮಳೆ ಕೂಡ ಜಾಸ್ತಿ ಬಂದಿದೆ. ತವುಗೆ ಗೊತ್ತಿದೆ, ಗ್ರಾಮಗಳೇಂದರೆ ಕಾರ್ಮಿಕರು ಇರುವುದೇ ಕೊಳಚೇ ಪ್ರದೇಶಗಳಲ್ಲಿ ಹೆಚ್ಚು ಜನ ಕಾರ್ಮಿಕರು ಕೊಳಚೇ ಪ್ರದೇಶದಲ್ಲಿ ವಾಸ ಮಾಡುತ್ತಿದ್ದರಿಂದ ಮಳೆ ಹೆಚ್ಚಿಗೆ ಬಂದಕಾರಣ ಅವರ ಗುಡಿಸಲುಗಳು ಬಿದ್ದುಹೋದವು. ಇದು ಬೇರೆ ಅವರಿಗೆ ತೊಂದರೆ. ಕಷ್ಟದಲ್ಲಿರುವವರಿಗೆ ಮತ್ತಷ್ಟು ಕಷ್ಟ ಜಾಸ್ತಿಯಾಯಿತು. ಇವತ್ತಿನ ದಿವಸ ಕಾರ್ಮಿಕರ ಸಮಸ್ಯೆ ಜಟಿಲ ಸಮಸ್ಯೆಯಾಗಿರುವಾಗ ಅಂಥವರನ್ನು ಗುರುತಿಸಿ ಅವರಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ. ತಾವು ೨೫ ಮಿನಿಟ್ ತೆಗೆದುಕೊಂಡಿರುತ್ತೀರಿ, ಇನ್ನು ಒಂದು ಗಂಟೆಯಲ್ಲಿ ಈ ವಿಷಯು ಮುಕ್ತಾಯವಾಗಬೇಕು. ಮಂತ್ರಿಗಳು ಉತ್ತರವನ್ನು ಕೊಡಬೇಕು.

ಶ್ರೀ ಕೆ. ಎಚ್, ಶ್ರೀನಿವಾಸ್ —ಮಾನ್ಯ ಅಧ್ಯಕ್ಷರೇ. ಮಾನ್ಯ ಪಂಪಾಪತಿಯವರು ಭಾಷಣ ಮಾಡುತ್ತಿಲ್ಲ. ಬಹಳ ಗಂಭೀರವಾದ ಸಮಸ್ಯೆಯನ್ನು ಹೇಳುತ್ತಿದ್ದಾರೆ. ಅವರು ಹೇಳುತ್ತಿರುವ ವಿಷಯಗಳನ್ನು ಕೇಳಿದರೆ ಕರಳು ಕಿವಿಚಿನ ರೀತಿಯಲ್ಲಿ ಹೇಳುತ್ತಿದ್ದಾರೆ. ಹಿಂದೆ ಇದೇರೀತಿ ದಿವಂಗತ ಗೋಪಾಲಗೌಡರ ಭಾಷಣವನ್ನು ಕೇಳಿದ್ದೇವೆ. ಅವರು ಒಂದು ಐದು ನಿಮಿಷ ಜಾಸ್ತಿ ಸಮಯ ಕೇಳಬಹುದು. ದಯವಿಟ್ಟು ಮಾತನಾಡಲು ಅವಕಾಶವನ್ನು ಕೊಡಿ

ಅಧ್ಯಕ್ಷರು.-ತಾವು ತಕರಾರು ಮಾಡಬಾರದೆಂದು ಆ ರೀತಿ ಹೇಳಿದೆ. ಮಾನ್ಯ ಪಂಪಾಪತಿಯವರೇ ಅವರದು ತಕರಾರು ಇಲ್ಲದಿದ್ದರೆ ತಾವು ಮಾತನಾಡಬಹುದು.

ಶ್ರೀ ಪಂಪಾಪತಿ.—ನಮ್ಮ ಉದ್ದೇಶವಿಷ್ಟೇ ಸ್ವಾಮಿ, ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಇಲ್ಲಿ ನಾನು ಹೇಳುವುದು, ನೀವು ಹೇಳುವುದು, ಬೇರೆಯವರು ಹೇಳುವುದು ಎಲ್ಲ ಒಂದೇ. ಯಾರಿಗೂ ಗೊತ್ತಿಲ್ಲದೆ ವಿಷಯವನ್ನು ನಾನು ಇಲ್ಲಿ ಬಂದು ಹೇಳುತ್ತಿಲ್ಲ. ಆದರೂ ಕೂಡ ಸರ್ಕಾರದ ಗಮನ ಸೆಳೆಯಬಯಸುವುದು ಏತಕ್ಕೆಂದರೆ ಈ ಮನೆಯಲ್ಲಿ ಪಾತನಾಡಿದರೆ ಸರ್ಕಾರಕ್ಕೆ ಎಚ್ಚರಿಕೆ ಇರುತ್ತದೆಂದು ಮಾತನಾಡುತ್ತಿದ್ದೇನೆ, ಈ ಬಗ್ಗೆ ಎರಡು ದಿವಸಗಳಿಂದ ಮಾತನಾಡುತ್ತಿದ್ದೇವೆ. ಆದರೂ ಈ ಮನೆಯಲ್ಲಿ ಏನು ಹೇಳುತ್ತಾರೆ ಅದನ್ನು ಹೇಳಿಕೊಂಡು ಹೋಗಲಿ. ಏನಾಗುತ್ತದೋ ಅದು ಆಗಲಿ ಅವರು ಸತ್ತುಹೋದರೆ ಸತ್ತುಹೋಗಲಿ ಎನ್ನುವ ರೀತಿಯಲ್ಲಿ ಸರ್ಕಾರ ಇರುವುದಾದರೆ ಏತಕ್ಕೆ ನಾವು ಮಾತನಾಡಬೇಕೆಂದು ತಮ್ಮನ್ನು ಕೇಳುತ್ತೇನೆ ? ಈ ಮಟ್ಟಕ್ಕೆ ಇವತ್ತು ಹೋಗುವುದಾದರೆ ನನ್ನ ಅನುಭವದಲ್ಲಿ ಹೇಳುವುದಾದರೆ ಸರ್ಕಾರ ಏತಕ್ಕೆ ಇರಬೇಕು ? ಯಾರಿಗೋಸ್ಕರವಾಗಿ ಇರಬೇಕು ? ದುಡಿಯತಕ್ಕಂಥ ಜನರಿಗೋಸ್ಕರವಾಗಿ ಇಲ್ಲದಿದ್ದರೆ ಸರ್ಕಾರ ಇರಬೇಕಾದ ಅಗತ್ಯವಿಲ್ಲ. ಈ ಸರ್ಕಾರವಾಗಲಿ, ಯಾವುದೇ ಸರ್ಕಾರವಾಗಲಿ, ಜನರ ಸಮಸ್ಯೆಯನ್ನು ತಿಳಿದುಕೊಂಡು, ಆ ಸಮಸ್ಯೆಯನ್ನು ಕೂಡಲೇ ಪರಿಹಾರ ಮಾಡತಕ್ಕಂಥ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಒಂದು ತಿಂಗಳು ಹೆಚ್ಚಾಗಬಹುದು, ಒಂದು ತಿಂಗಳು ಕಡಿಮೆಯಾಗಬಹುದು, ಪರವಾಗಿಲ್ಲ. ಆದರೆ ವರ್ಷಾನ ಗಟ್ಟಲೆ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದುಕೊಳ್ಳಬಾರದು. ಅದಕ್ಕೆ ಕೂಡಲೇ ಚಾಲನಾ ಶಕ್ತಿಯನ್ನು ಕೊಡಬೇಕು. ಅವರನ್ನು ಕರೆಸಿ ಮಾತನಾಡಬೇಕು. ಅಧಿಕಾರಿಗಳನ್ನು ನೋಡಿದರೆ ವಿಂಡಿಂಗ್‌ನಲ್ಲಿರುತ್ತಾರೆ. ಮಂತ್ರಿಗಳನ್ನು ನೋಡಿದರೆ ಪ್ರವಾಸದಲ್ಲಿ ಇರುತ್ತಾರೆ ಏನು ಕತೆ ಸ್ವಾಮಿ ಇದು. ನಿಮ್ಮನ್ನು ಕೇಳಿದರೆ ನೀವು ಏನಾದರೂ ಪರಿಹಾರ ಮಾಡಿಕೊಡುತ್ತೀರಾ ? ಹಾಗಿದ್ದರೆ ನಿಮ್ಮನ್ನೇ ಕೇಳುತ್ತೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಈವತ್ತು ಎನೊಂದು ಪರಿಸ್ಥಿತಿ ಉಂಟಾಗಿದೆ ಎಂಬುದು ತವುಗೆ ಗೊತ್ತಿದೆ. ಏತಕ್ಕೆಂದರೆ ತಾವು ರೈತರ ಬಗ್ಗೆ ತುಂಬಾ ಕಳಕಳಿಯನ್ನು ಹೊಂದಿರತಕ್ಕಂಥವರು. ಕೈಗಾರಿಕೆಗಳನ್ನು ಮುಚ್ಚಿದರೆ ಈ ರಾಜ್ಯದಲ್ಲಿ

ಹಶ್ತಿಯನ್ನು ಬೆಳೆಯುತಕ್ಕಂಥ ರೈತರಿಗೆ ಅನ್ಯಾಯವಾಗುತ್ತದೆ ಎನ್ನುತಕ್ಕಂಥದ್ದನ್ನೂ ಕೂಡ ನಮ್ಮ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಇದರ ಜೊತೆಯಲ್ಲಿ ವ್ಯಾಪಾರ ಮಹಿವಾಟಿನಿಂದ ಸರ್ಕಾರಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಗುತ್ತದೆ ಎನ್ನುವುದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಆದೆಲ್ಲವನ್ನು ಯೋಚನೆ ಮಾಡಿ ಆದಷ್ಟು ಜಾಗ್ರತೆಯಾಗಿ ಈ ಕೈಗಾರಿಕೆಗಳನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಏತಕ್ಕೆಂದರೆ ಸಹಕಾರಿ ಕಾರ್ಖಾನೆಗಳನ್ನು ಪಾಳುಗೆಡವಿ ಬಿಟ್ಟುಬಿಡುವುದಕ್ಕೆ ಆಗುವುದಿಲ್ಲ. ಬಳ್ಳಾರಿ, ಬಿಜಾಪುರ, ರಾಯಚೂರು, ಬಾಗಲಕೋಟೆ, ಇಲ್ಲಿರತಕ್ಕಂಥ ಕಾರ್ಖಾನೆಗಳಿಗೆ ಸರ್ಕಾರದವರು ಹಣವನ್ನು ಕೊಟ್ಟಿರುತ್ತಾರೆ. ಬೇರೆ ಬೇರೆ ಕೈಗಾರಿಕೆಗಳವರು ಬ್ಯಾಂಕಿನಿಂದ ಹಣವನ್ನು ಪಡೆದಿರುತ್ತಾರೆ. ಕೊಟ್ಟಿರುವ ಹಣವೆಲ್ಲ ಸರಿಯಾಗಿ ಉಪಯೋಗವಾಗಬೇಕಾದರೆ ಕೈಗಾರಿಕೆಗಳು ನಡೆಯಬೇಕು. ಕಾರ್ಮಿಕರಿಗೆ ಕೆಲಸ ಸಿಗಬೇಕು. ಅವರು ನೆಮ್ಮದಿಯಿಂದ ಜೀವನಮಾಡಿದರೆ ಸರ್ಕಾರಕ್ಕೂ ಕೂಡ ಆದಾಯಬರುತ್ತದೆ.

ಲೆ-೫೦ ಪಿ.ಎಂ.

ನಾವು ಒಂದೂವರೆ ವರ್ಷದಿಂದ ಮಾಡಬಾರದ ಪ್ರಯತ್ನಗಳನ್ನೆಲ್ಲ ಮಾಡಿದ್ದೇವೆ. ಶಾಂತಿಯುತವಾದ ಪ್ರಯತ್ನ ಮಾಡಿದ್ದೇವೆ. ಇದೇ ಶಾಂತಿ ಸುವ್ಯವಸ್ಥೆ ಇನ್ನು ಮುಂದೆಯೂ ಉಳಿಯುತ್ತದೆಂಬ ಭರವಸೆ ನಮಗೆ ಕಡಿಮೆಯಾಗುತ್ತಿದೆ ಆದುದರಿಂದ ದಯವಿಟ್ಟು ಕಾರ್ಮಿಕ ವರ್ಗ ಬೇರೆ ರೀತಿಯಲ್ಲಿ ಯೋಚನೆ ಮಾಡದಿರತಕ್ಕ ರೀತಿಯಲ್ಲಿ ಒಂದು ಒಳ್ಳೆಯ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡುವುದಕ್ಕೆ ತಾವು ಪ್ರಯತ್ನಿಸಬೇಕು. ಯಾವ ಯಾವ ಕೈಗಾರಿಕೆಗಳನ್ನು ನೀವು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ ಆ ಎಲ್ಲಾ ಕೈಗಾರಿಕೆಗಳ ಮಾಲೀಕರನ್ನು ಮತ್ತು ಡೈರೆಕ್ಟರ ಗಳನ್ನು ಕರೆಸಿ ಮಾತನಾಡಿ ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅವರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೈಗಾರಿಕೆಗಳನ್ನು ಪ್ರಾರಂಭಿಸುವುದರಿಂದ ರಾಜ್ಯದಲ್ಲಿ ಕೈಗಾರಿಕೆ ಶಾಂತಿ ಉಳಿಯುತ್ತದೆ ಮತ್ತು ಕೈಗಾರಿಕೆಯಲ್ಲಿರತಕ್ಕ ನಿರುದ್ಯೋಗ ಸಮಸ್ಯೆ ಕೂಡ ಕಡಿಮೆಯಾಗುತ್ತದೆ. ನಿರುದ್ಯೋಗ ಸಮಸ್ಯೆಯ ಬಗ್ಗೆ ನಾವು ಬಹಳ ಮಾತನಾಡುತ್ತೇವೆ, ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ, ಮನೆಗೊಂದು ಕೆಲಸ ಒದಗಿಸುತ್ತೇವೆ ಎಂದೆಲ್ಲ ಹೇಳುತ್ತೇವೆ. ಆದ್ದರಿಂದ ದಯವಿಟ್ಟು ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇಲ್ಲಿಯವರೆಗೆ ಹೇಳಿರತಕ್ಕ ಎಲ್ಲಾ ವಿಷಯಗಳನ್ನು ಮಾನ್ಯ ಸಚಿವರು ಬಹಳ ಗಮನಕೊಟ್ಟು ಕೇಳಿದ್ದಾರೆ ಮತ್ತು ಎಲ್ಲವನ್ನು ಬರೆದುಕೊಂಡಿದ್ದಾರೆ. ಅದನ್ನು ಹೊರಗಡೆ ಹೋಗಿ ಹರಿದು ಹಾಕದೆ ಅಧಿಕಾರಿಗಳನ್ನು ಕರೆಸಿ ಸರಿಯಾದ ವ್ಯವಸ್ಥೆ ಮಾಡಿ ಕೈಗಾರಿಕೆಗಳನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ದಿವಸ ನನಗೆ ಬಹಳ ಹೊತ್ತು ನನ್ನ ಮನಸ್ಸಿನಲ್ಲಿರತಕ್ಕ ಅಭಿಪ್ರಾಯಗಳನ್ನು ಪ್ರಕ್ಷಪಡಿಸುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತಿಗೆ ಮಂಗಳ ಹಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಮಾನ್ಯ ಅಧ್ಯಕ್ಷರೆ, ರೂಲ್ ೬೮ರ ಮೇಲೆ ಕರ್ಜಿ ಮಾಡುವಾಗ ಮಾನ್ಯ ಪಟೇಲರು ಇರಬೇಕಾಗಿತ್ತು ಏಕೆಂದರೆ ಅವರು ಈ ಬಗ್ಗೆ ಅನೇಕ ಸೆಮಿನೋಷಿಯೇಶನ್‌ಗಳನ್ನು ನಡೆಸಿದ್ದರು. ಆದ್ದರಿಂದ ಅವರು ಇದ್ದಿದ್ದರೆ ಚೆನ್ನಾಗಿ ಅರ್ಥಪ್ರಯೋಗವಾಗುತ್ತಿತ್ತು ಆದರೆ ಸಿಂಧ್ಯರವರು ಬಂದಿದ್ದಾರೆ ಅವರು ಹೊಸಬರು ದಯವಿಟ್ಟು ಅವರು ತಪ್ಪು ತಿಳಿದುಕೊಳ್ಳಬಾರದು. ಕೆ. ಆರ್ ಮಿಲ್ಸ್ ಮುಚ್ಚಿ ಒಂದು ವರ್ಷವಾಯಿತು. ಸತತವಾಗಿ ೪-೬ ಸಾರಿ ನಾನು ಮತ್ತು ಕೃಷ್ಣನ್ ರವರು ಸೇರಿ ಪಟೇಲರಿಗೆ ಹೇಳಿದೆವು. ಇದ್ದ ಆಸ್ತಿಗಳನ್ನು ಒಂದೊಂದಾಗಿ ಮಾರಿಕೊಂಡು ಬರುತ್ತಿದ್ದಾರೆ. ಕಾರ್ಮಿಕರಿಗೆ ಪರಿಹಾರ ಕೊಟ್ಟಿಲ್ಲ. ಪಟೇಲರು ಹೇಳಿದರು ಕೆ ಆರ್ ಮಿಲ್ಸ್‌ಗೆ ಸಂಬಂಧ ಪಟ್ಟಂತೆ ಕ್ರಿಮಿನಲ್ ಕೇಸ್ ಹಾಕಿದ್ದರೂ ಪ್ರಯೋಜನವಾಗಿಲ್ಲ ಎಂದು ಒಂದೊಂದು ಮಿಲ್ಲಿನ ಚರಿತ್ರೆ ಬೇಕಾದಷ್ಟು ಇದೆ. ಅದೆಲ್ಲ ಮಾನ್ಯ ಪಟೇಲರಿಗೆ ಗೊತ್ತು. ಪ್ರತಿಯೊಂದು ಮಿಲ್‌ಗಳು ಮುಚ್ಚಿದಾಗ ನಾವು ಹೋಗಿ ಅವರನ್ನು ಕಂಡಿದ್ದೆವು. ಅವರು ಮಾತನಾಡಿದ್ದರು ಮಿಲ್ಲಿನ ಮಾಲೀಕರನ್ನು ಕರೆಸಿ ಮಾತನಾಡಿದ್ದರು. ನಗೋಷಿಯೇಶನ್ ಜರಂಗಿತ್ತು. ನಿಜವಾಗಿ ಬಹಳ ಚೆನ್ನಾಗಿ ಕೆಲಸ ಮಾಡಿ ಸಹಾಯ ಮಾಡಿದ ಶ್ರೀ ಎಸ್. ಕೆ. ಕಾಂತ್ ಅವರನ್ನು ನಾವು ನೆನಸಿಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇತಿಹಾಸದಲ್ಲಿ ಮೊದಲ ಸಾರಿ ಇರಬಹುದು. ವಿರೋಧ ಪಕ್ಷದವರು ಜಾಸ್ತಿ ಇದ್ದು ಆಡಳಿತ ಪಕ್ಷದವರು ಕೇವಲ ೫ ಜನ ಮಾತ್ರ ಇದ್ದು ಸಭೆಯನ್ನು ನಡೆಸುತ್ತಿರುವುದು. ಈಗೇನಾದರೂ ಓಟಿಗೆ ಹಾಕಿದರೆ ಎಲ್ಲಾ ಬಿದ್ದುಹೋಗುತ್ತವೆ. ಅಮೆಂಡ್‌ಮೆಂಟ್ ತನ್ನಿ, ಗೊತ್ತಾಗುತ್ತದೆ.

ಅಧ್ಯಕ್ಷರು.—ಕೆಲವರು ಚಹಾ ಕುಡಿಯುವುದಕ್ಕೆ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮೂರನೇ ಎರಡು ಭಾಗ ಮೆಜಾರಿಟಿ ಇದ್ದವರು...

ಅಧ್ಯಕ್ಷರು.—ಹಾಗೇನೂ ಇಲ್ಲ. ನಿಮಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಕೊಡಲಿ ಎಂದು ಅವರು ಹಾಗೆ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರೂ ಕೇಳುವುದಕ್ಕೆ ಇರುವುದಿಲ್ಲ ನಿಮಗೆ ಬೇಕಾದಷ್ಟು ಮಾತನಾಡಿ ಹೋಗಿ ಎಂದೇ?

ಶ್ರೀ ಆರ್ ವೆಂಕಟರಾವ್.—ಬಳ್ಳಾರಿ, ಬಿಜಾಪುರ, ರಾಯಚೂರು ಮುಂತ್ತಾ ಬಾಗಲಕೋಟೆಯ ಸಹಕಾರ ಸೂಲಿನ ಗಿರಣಿಗಳ ಬಗ್ಗೆ ವಿಚಾರಣೆ ನಡೆಸಲು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದರು. ಆಗ ಏಕಾಂತಯ್ಯನವರು ಸಹಕಾರ ಸಚಿವರಾಗಿದ್ದರೂ ಕೇವಲ ೮ ದಿನಗಳಲ್ಲಿ ಬ್ಯಾನ್ ಮಾಡುತ್ತೇವೆಂದು ಹೇಳಿದವರು ಇದುವರೆಗೆ ಮಾಡಲಿಲ್ಲ. ಪ್ರೋತ್‌ದಾರ್‌ರವರು ಕೂಡ ರಾಯಚೂರು ಮಿಲ್ಲನ್ನು ೧೫ ದಿನಗಳಲ್ಲಿ ಓಪನ್ ಮಾಡಿಸುತ್ತೇನೆಂದು ಒಪ್ಪಿಕೊಂಡರು. ಏಕಾಂತಯ್ಯನವರು ಎಲ್ಲರೂ ಸೇರಿ ಮಿಲ್ ಮುಚ್ಚಿರುವುದರಿಂದ ಆಗಿರುವ ಅನ್ಯಾಯವನ್ನು ಸರಿಪಡಿಸುತ್ತೇವೆಂದು ಹೇಳಿದರು. ಇದುವರೆಗೆ ಏನೂ ಆಗಲಿಲ್ಲ. ಪರಿಣಾಮವಾಗಿ ೧೫ ಸಾವಿರ ಜನರಿಗೆ ಕೆಲಸ ಇಲ್ಲದಂತಾಗಿದೆ. ಪ್ರತಿಯೊಂದು ಮಿಲ್ಲಿಗೆ ಹತ್ತು ಕೋಟಿ ರೂಪಾಯಿಗಳ ಮೂಲ ಬಂಡವಾಳವನ್ನು ಹೂಡಲಾಗಿದೆ. ಈ ಮಿಲ್ಲುಗಳಿಗೆ ಬೇಕಾಗಿರುವಂತಹದ್ದು ಸಾಧಾರಣ ೪–೫ ಲಕ್ಷ ರೂಪಾಯಿಗಳನ್ನು ಸರ್ಕಾರ ಸಹಾಯ ಮಾಡಿದರೆ ಈ ಮಿಲ್ಲುಗಳು ವಂಶ್ಕೆ ಪ್ರಾರಂಭ ಆಗುತ್ತವೆ. ಆದ್ದರಿಂದ ಶ್ರದ್ಧೆಯಿಂದ ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಕೆಲವು ಮಿಲ್ಲುಗಳಿಗೆ ಮುಖ್ಯವಾಗಿ ಸಹಕಾರಿ ಸೂಲಿನ ಗಿರಣಿಗಳಿಗೆ ಅವರು ಉಪಯೋಗಿಸುವಂತಹ ಎಲೆಕ್ಟ್ರಿಸಿಟಿಗೆ ರಿಯಾಯಿತಿ ಕೊಟ್ಟರೆ ಸಾಕು, ಅವು ಪುನ: ಆರಂಭವಾಗುತ್ತವೆ ಅಂತ ಕೂಡ ಅವರು ಹೇಳಿದರು. ಆದರೆ ಇಲ್ಲಿಯವರೆಗೆ ಯಾವ ಪ್ರಯತ್ನವನ್ನೂ ಕೂಡ ಮಾಡಲಿಲ್ಲ. ಆಮೇಲೆ ಮಿನಿಸ್ಟ್ರಿ ಬದಲಾಯಿತು. ಏಕಾಂತಯ್ಯನವರು ಹೋದರು. ಕಾಂತಾರವರು ಮನೆಗೆ ಹೋದರು. ಪ್ರೋತದಾರ್‌ರವರ ಹೆಸರೇ ಇಲ್ಲ. ಈಗ ಈ ಕಾರ್ಮಿಕರ ತಲೆಯ ಮೇಲೆದೊಡ್ಡ ಬಂಡೆ ಬಿತ್ತು. ನಾವು ಹೋರಾಟ ಮಾಡುತ್ತಿದ್ದೇವೆ ಮಿನರ್ವ ಮಿಲ್ ಬಗ್ಗೆ ಹೋರಾಟ ನಡೆದಾಗ ಅವರು ಹೇಳಿದರು, ನಾವು ಕಂಪ್ಯೂಟರ್‌ನ್ನು ಆಳವಡಿಸುತ್ತೇವೆ ಎಂದು ಅದಕ್ಕೂ ಕೂಡ ನಾವು ಒಪ್ಪಿಕೊಂಡೆವು ಈಗ ಅಲ್ಲೂ ಕಂಪ್ಯೂಟರ್ಸ್‌ನ್ನು ಆಳವಡಿಸಿದ್ದಾರೆ. ಅದೇ ರೀತಿ ಗುಲ್ಬರ್ಗದ ಎಂ.ಎಸ್ ಕೆ.ಮಿಲ್ ಬಗ್ಗೆ ಹೇಳಿದರು. ಮೊನ್ನೆ ದಿವಸ ಕೂಡ ಇನ್ಯಾವುದೋ ವಿಚಾರದಲ್ಲಿ ಹೇಳಿದರು ಇದಕ್ಕೆ ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತಾರೆ. ಅದನ್ನು ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು ಅದೂ ನಿಂತಿದೆ. ಈ ರೀತಿಯಾಗಿ ಒಂದೊಂದು ಮಿಲ್ಲಿಗೂ ಒಂದೊಂದು ಚರಿತ್ರೆ ಇದೆ. ಇವೆಲ್ಲಾ ಮಾನ್ಯ ಜೆ. ಹೆಚ್. ಪಟೇಲ್‌ರವರಿಗೆ ಚೆನ್ನಾಗಿ ಗೊತ್ತಿತ್ತು. ಅವರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಆದರೆ ಇವತ್ತು ಅವರು ಇಲ್ಲ ಈಗ ಮಾನ್ಯ ಸಿದ್ಧಾರ್ಥರವರನ್ನು ಕೇಳಿಕೊಳ್ಳುವುದೇನೆಂದರೆ, ೧೪,೭೦೦ ಜನ ಇವುಗಳಲ್ಲಿಲ್ಲಾ ಕೆಲಸ ಮಾಡುತ್ತಿದ್ದಾರೆ. ಸುಮಾರು ೧೦ ಲಕ್ಷ ಬಡ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಕೆ. ಆರ್. ಮಿಲ್ ನಿಂತು ಹೋಗಿ ಎರಡು ವರ್ಷಗಳಾಯಿತು. ಅದೇ ಗುಲ್ಬರ್ಗದಲ್ಲಿರುವಂತಹ ಎಂ. ಎಸ್. ಕೆ. ಮಿಲ್ ನಿಂತುಹೋಗಿ ೬ ತಿಂಗಳಾಯಿತು ಅಂತ ಕಾಣುತ್ತೆ ಅದು ಮಾನ್ಯ ಖರ್ಗೆಯವರಿಗೆ ಚೆನ್ನಾಗಿ ಗೊತ್ತಿದೆ. ಗಣೇಶ ಸಿದ್ಧೇಶ್ವರ, ಚಿಗಟೇರಿ, ಆಂಜನೇಯ, ಶಂಕರ್ ಟೆಕ್ಸ್‌ಟೈಲ್ ಮಿಲ್ಲುಗಳು ನಿಂತಾಗ ಅದನ್ನು ಪ್ರಾರಂಭ ಮಾಡುವಂತೆ ಮಾನ್ಯ ಪಂಪಾಪತಿಯವರು ಸತ್ಯಾಗ್ರಹ ನಡೆಸಿ ಗಡ್ಡವನ್ನು ಬೆಳೆಸಿದರು. ಆ ಒಂದು ಘಟನೆಯಲ್ಲಿ ಅವರು ಬಳ್ಳಾರಿ ಜೈಲನ್ನೂ ಕೂಡ ನೋಡಿಕೊಂಡು ಬಂದರು. ಅವುಗಳು ಏನಾದರೂ ಓಪನ್ ಆದರೆ, ಗಡ್ಡ ತೆಗೆಯುತ್ತೇನೆಂದು ಹೇಳಿದ್ದಾರೆ. ಆದರೆ ಅವುಗಳು ಓಪನ್ ಆಗುತ್ತವೆಂಬ ಚಾನ್ಸ್ ಕೂಡ ನನಗೆ ಇಲ್ಲ. ಆ ಬಗ್ಗೆ ನಂಬಿಕೆಯೇ ಇಲ್ಲ. ಆದ್ದರಿಂದ ಇವುಗಳ ಬಗ್ಗೆ ಶ್ರದ್ಧೆಯಿಂದ ಕೆಲಸ ಮಾಡಿದರೆ ಈಗಲೂ ಕೂಡ ಅವು

ಗಳನ್ನು ತೆಗೆಸಬಹುದು ಆ ಪ್ರಯತ್ನವನ್ನು ಅವರು ಮಾಡಿದರೆ ಆದು ಆಗುತ್ತದೆ. ಆದು ಬಿಟ್ಟು, ಬೇಕಾಬಿಟ್ಟಿಯಾಗಿ. ಈ ಪಂಪಾಪತಿಯವರಿಗೂ ಹಾಗೂ ವೆಂಕಟರಾವಯ್ಯನವರಿಗೂ ಕೆಲಸ ಇಲ್ಲ. ಯಾವಾಗಲೂ ಇಂತಹ ವಿಷಯಗಳನ್ನೇ ಇಲ್ಲಿ ಎತ್ತುತ್ತಿರುತ್ತಾರೆ ಎಂದು ಭಾವಿಸುವುದು ಸರಿಯಲ್ಲ. ಇವತ್ತಿಗೆ ಈ ಅಸೆಂಬ್ಲಿ ಮುಂಗಿದು ಹೋಗುತ್ತದೆ. ನಾವೂ ಕೂಡ ಮನೆಗೆ ಹೋಗಿ ಬಿಡುತ್ತೇವೆ. ಇನ್ನು ೪-೫ ತಿಂಗಳು ನಮ್ಮನ್ನು ಕೇಳುವವರೇ ಇಲ್ಲ. ನಮ್ಮನ್ನು ಕೇಳಿದ್ದರೂ ಪರವಾಯಿಲ್ಲ. ಅವರ ಪರವಾಗಿ ನಾವು ಸರ್ಕಾರವನ್ನು ಕೇಳುತ್ತಿದ್ದೇವೆ.

ಶ್ರೀ ಬಿ. ಎ. ಉವಾರಬ್ಬಿ.—ವೆಂಕಟರಾಮಯ್ಯನವರೇ, ಈಗಲೇ ನಿಮ್ಮನ್ನು ಕೇಳುವವರೇ ಇಲ್ಲ. ಸಭೆಯಲ್ಲಿ ಕೋರಂ ಇಲ್ಲ. ಆದರೂ ಮುಂದುವರಿಯಲಿ. You can continue though there is no quorum.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಮಾನ್ಯ ಸಿಂಧ್ಯಾರವರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಸ್ವಲ್ಪ ಸಿನ್ಸಿಯರ್‌ರಾಗಿ ಪ್ರಯತ್ನ ಮಾಡಿದರೆ ನಿಜವಾಗಿಯೂ ಈ ಮಿಲ್ಲುಗಳನ್ನು ಓಪನ್ ಮಾಡಬಹುದು. ಇದಕ್ಕೆ ದೊಡ್ಡ ಬಂಡವಾಳವೇನೂ ಬೇಕಾಗಿಲ್ಲ. ರಾಯಚೂರಿನ ಯರಮರಸ್ ಮಿಲ್ ಬಗ್ಗೆ ೩-೪ ಲಕ್ಷ ಸಹಾಯ ಮಾಡಿದರೆ ಸಾಕು. ೧೧ ಕೋಟಿ ರೂಪಾಯಿಗಳ ಬಂಡವಾಳ ಹಾಕಿರತಕ್ಕ ಈ ಮಿಲ್ಲುಗಳ ಬಗ್ಗೆ ನಾವು ಕೇಳಿದಾಗ, ಸರ್ಕಾರದವರು ಟ್ಯಾಕ್ಸ್ ಎಗ್ಸಂಪ್ಷನ್ ಕೊಟ್ಟರೆ ಸಾಕು. ಇಲ್ಲದಿದ್ದರೆ ಅವರು ಉಪಯೋಗಿಸುವಂತಹ ಎಲೆಕ್ಟ್ರಿಸಿಟಿಗೆ ಎಗ್ಸಂಪ್ಷನ್ ಕೊಟ್ಟು ೩-೪ ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟರೆ ಸಾಕೆಂದು ಮೊನ್ನೆ ಪ್ರಾಮಿಸ್ ಮಾಡಿದ್ದವರೇ ಪೋಸ್ಟ್‌ದಾರ್‌ರವರೇ ಒಪ್ಪಿಕೊಂಡರು. ಅದನ್ನು ಅಂದೇ ಮಾಡಲಿಲ್ಲ. ಇವತ್ತು ಆದು ೭ ಲಕ್ಷದಿಂದ ೩೦ ಲಕ್ಷ ಆಗುತ್ತದೆ. ಈ ರೀತಿಯಾಗಿ ನಿಂತು ಹೋಗಿರತಕ್ಕ ಪ್ರತಿಯೊಂದು ಮಿಲ್ಲುಗಳನ್ನು ಪುನಃ ತೆರೆಯಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆ ಬಗ್ಗೆ ಸರ್ಕಾರಿನ್ಸಿಯರ್‌ರಾಗಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ೧೫ ಸಾವಿರ ಕಾರ್ಮಿಕರ ಸಮಸ್ಯೆ ಇದು.

ಅಧ್ಯಕ್ಷರು.—ಆಯಿತು ಈಗ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಪಾಪತಿಯವರು ಹಾಗೂ ಮಾನ್ಯ ವೆಂಕಟರಾಮಯ್ಯನವರು ಎತ್ತಿರತಕ್ಕ ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳ ಪರವಾಗಿ ಈ ಒಂದು ಹೇಳಿಕೆಯನ್ನು ಕೊಡುತ್ತೇನೆ. ಅದರ ನಂತರ ಅವರು ಎತ್ತಿರತಕ್ಕ ಇನ್ನಿತರೆ ವಿಷಯಗಳ ಬಗ್ಗೆಯೂ ವಿವರಗಳನ್ನು ಕೂಡುತ್ತೇನೆ. ಸಧ್ಯಕ್ಕೆ ಬೆಂಗಳೂರಿನಲ್ಲಿಯ ಎನ್. ಟಿ.ಸಿ ಸ್ವಾಮ್ಯಕ್ಕೆ ಸೇರಿದಂತಹ ಮಿನರ್ವ ಮಿಲ್ ಗುಲ್ಬರ್ಗದಲ್ಲಿಯ ಎಂ. ಎಸ್.ಕೆ. ಮಿಲ್ ಲಾಕೌಟ್ ಆಗಿದೆ, ಮೈಸೂರಿನ ಕೆ ಆರ್. ಮಿಲ್, ಸಹಕಾರಿ ವಲಯದಲ್ಲಿರುವ ರಾಯಚೂರು ಸ್ಪಿನ್ನಿಂಗ್ ಮಿಲ್, ಬಳ್ಳಾರಿಯಲ್ಲಿನ ಸ್ಪಿನ್ನಿಂಗ್ ಮಿಲ್ ಮತ್ತು ಬಿಜಾಪುರದಲ್ಲಿನ ಸ್ಪಿನ್ನಿಂಗ್ ಮಿಲ್‌ಗಳು ಕೆಲಸ ಮಾಡುತ್ತಿಲ್ಲ. ದಾವಣಗೆರೆ ಗಣೇಶ, ಸಿದ್ದೇಶ್ವರ ಚಿಗಟೇರಿ ಮಿಲ್ಲುಗಳೂ ಕೆಲಸ ಮಾಡುತ್ತಿಲ್ಲ. ಎನ್. ಟಿ.ಸಿ. ಮಿಲ್‌ಗಳು ಬಿಟ್ಟು ಉಳಿದ ಮಿಲ್‌ಗಳು ಹಣಕಾಸಿನ ಕಾರಣದಿಂದಾಗಿ ಕೆಲಸವನ್ನು ನಿಲ್ಲಿಸಿವೆ. ಬೆಂಗಳೂರಿನಲ್ಲಿಯ ಮಿನರ್ವ ಮಿಲ್ ಗುಲ್ಬರ್ಗದಲ್ಲಿಯ ಎಂ.ಎಸ್.ಕೆ. ಮಿಲ್ ಘೋಷಿಸಲ್ಪಟ್ಟ ಬೀಗಮುದ್ರೆ ಮುಂದುವರಿಕೆಯನ್ನು ನಿಷೇದಿಸಲಾಗಿದೆ. ಅಲ್ಲಿನ ವಿವಾದಗಳನ್ನು ನ್ಯಾಯ ಪಂಚಾಯ್ತಿಗೆ ಒಪ್ಪಿಸಲಾಗಿದೆ. ಅದನ್ನು ಆಡಳಿತ ವರ್ಗದವರು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಒಯ್ದಿದ್ದಾರೆ. ಮಿಕ್ಕ ಟೆಕ್ಸ್‌ಟೈಲ್ ಮಿಲ್ಲುಗಳು ಹಣಕಾಸಿನ ತೊಂದರೆಯಿಂದ ಕೆಲಸ ಮಾಡದೆ ಇವೆ ಈ ಮಿಲ್ಲುಗಳಲ್ಲಿ ಚಿಗಟೇರಿ ಮಿಲ್ ದಾವಣಗೆರೆ, ಇಲ್ಲಿ ಕಾರ್ಮಿಕರಿಗೂ ಹಾಗೂ ಆಡಳಿತದ ವರ್ಗದ ಮಧ್ಯ ಒಪ್ಪಂದವಾಗಿ ಮಿಲ್ಲನ್ನು ಮುಚ್ಚಿಲು ಒಪ್ಪಂದಕ್ಕೆ ಬಂದಿದ್ದಾರೆ. ಗಣೇಶ ಟೆಕ್ಸ್‌ಟೈಲ್ ಮಿಲ್. ದಾವಣಗೆರೆ ವಿಷಯದಲ್ಲಿ ಹೊಸದಾಗಿ ಒಪ್ಪಂದವಾಗಿ ಕಾರ್ಮಿಕರು ಹಾಗೂ ಆಡಳಿತ ವರ್ಗದವರ ನಡುವೆ ಒಪ್ಪಂದಕ್ಕೆ ಬರಲಾಗಿದೆ. ಆದು ದೆಹಲಿಯ ವಿ.ಐ.ಎಫ್.ಆರ್. ಮುಂದೆ ಹೋಗಿದ್ದು ಅದರ ಶಿಫಾರಸ್ಸಿನ ಪ್ರಕಾರ ಹಣಕಾಸಿನ ಸಹಾಯವನು ಪಡೆದು ಪುನರಾರಂಭ ಮಾಡಬೇಕಾಗಿದೆ ದಾವಣಗೆರೆಯ ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್‌ನ ವಿಷಯದಲ್ಲೂ ಇದೇ ಕಾರ್ಯಕ್ರಮಗಳನ್ನು ಅನುಸರಿಸಬೇಕಾಗಿದೆ. ಮೈಸೂರಿನ ಕೆ.ಆರ್.ಮಿಲ್ ವಿಷಯವೂ ಸಹ ದೆಹಲಿಯ ವಿ.ಐ.ಎಫ್.ಆರ್. ಮುಂದೆ ಇದೆ. ಸಹಕಾರಿ ವಲಯದಲ್ಲಿರುವ ರಾಯಚೂರು, ಬಳ್ಳಾರಿ ಹಾಗೂ ಬಿಜಾಪುರ ಮಿಲ್ಲುಗಳ ವಿಷಯದಲ್ಲಿ ಹಿಂದಿನ ಕಾರ್ಮಿಕ ಸಚಿವರು ಹಾಗೂ ಸಹಕಾರಿ ಸಚಿವರು ಒಂದು

ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯು ವಿಷಯವನ್ನು ಪರಿಶೀಲಿಸುತ್ತಿದೆ. ಅವುಗಳನ್ನು ಪುನರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಎನ್.ಟಿ.ಸಿ.ಗೆ ಸೇರಿದ ಮಿನರ್ವ ಮಿಲ್ ಮತ್ತು ಎಂ.ಎಸ್.ಕೆ ಮಿಲ್ ಗುಲ್ಬರ್ಗ ಇವೆರಡು ಮಾತ್ರ ಕಾರ್ಮಿಕರ ವಿವಾದದ ಕಾರಣದಿಂದಾಗಿ ಮತ್ತು ಕೆಲಸಗಾರರು ಹೆಚ್ಚಿನ ಕೆಲಸದ ಒತ್ತಡಗಳಿಂದ ಹಾಗೂ ಅವುಗಳ ಆಧುನೀಕರಣಕ್ಕೆ ಒಪ್ಪುತ್ತಿಲ್ಲ ಎಂಬ ಕಾರಣ ಕೊಟ್ಟು ಬೀಗಮುದ್ರೆಯನ್ನು ಘೋಷಿಸಲಾಗಿದೆ ಈ ವಿವಾದಗಳ ಬಗ್ಗೆ ಸಂಧಾನಕ್ಕೆ ಬರುವುದಕ್ಕೆ ವಿಫಲವಾದ ಕಾರಣ ಬೀಗ ಮುದ್ರೆ ಮುಂದುವರಿಕೆಯನ್ನು ನಿಷೇಧಿಸಲಾಗಿದೆ. ನ್ಯಾಯ ಪಂಚಾಯಿತಿಗೆ ಇವುಗಳನ್ನು ಒಪ್ಪಿಸಲಾಗಿದೆ. ಆದರೆ ಎನ್.ಟಿ.ಸಿ-ಯ ಆಡಳಿತ ವರ್ಗದವರು ಈ ಆದೇಶ ಗಳನ್ನು ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಅದು ಅಲ್ಲಿ ವಿಚಾರಣೆಯಲ್ಲಿದೆ. ವಿಚಾರಣೆ ಮುಗಿಯುವವರೆಗೆ ಕಾಯಬೇಕಾಗಿದೆ. ಮಿಕ್ಕ ಎಲ್ಲಾ ಟೆಕ್ಸ್‌ಟೈಲ್ ಮಿಲ್ಲುಗಳು ಹಣಕಾಸಿನ ತೊಂದರೆಯಿಂದ ರೋಗಗ್ರಸ್ತವಾಗಿವೆ. ಅವುಗಳ ವಿಷಯ ದೆಹಲಿಯ ವಿ.ಐ.ಎಫ್.ಆರ್. ಮುಂದೆ ಇದೆ. ವಿ.ಐ.ಎಫ್.ಆರ್. ಸಂಸ್ಥೆಯ ವಿಚಾರಣೆಯ ನಂತರ ಆದರ ಶಿಫಾರಸ್ಸಿನ ಮೇರೆಗೆ ಹಣಕಾಸಿನ ಸಂಸ್ಥೆಗಳು ಆಡಳಿತ ವರ್ಗಕ್ಕೆ ಸಹಾಯ ಮಾಡುವುದಾದರೆ ಅವುಗಳಿಗೆ ರಾಜ್ಯ ಸರ್ಕಾರ ಕೆಲವು ರಿಯಾಯಿ ತಿಗಳನ್ನು ನೀಡುತ್ತದೆ. ಈ ರೀತಿ ದಾವಣಗೆರೆಯ ಗಣೇಶ ಟೆಕ್ಸ್‌ಟೈಲ್ ಮತ್ತು ಸಿದ್ದೇಶ್ವರ ಟೆಕ್ಸ್ ಟೈಲ್ ಮಿಲ್ಲುಗಳು ಪುನರಾರಂಭವಾಗುವ ಸೂಚನೆ ಇದೆ. ಮೈಸೂರಿನ ಕೆ.ಆರ್. ಮಿಲ್ಲಿನ ವಿಷಯ ಸಹ ವಿ.ಐ.ಎಫ್.ಆರ್. ಮುಂದೆ ಇದೆ. ಸಹಕಾರಿ ವಲಯದಲ್ಲಿರುವ ರಾಯಚೂರು, ಬಳ್ಳಾರಿ ಹಾಗೂ ಬಿಜಾಪುರ ಮಿಲ್ಲುಗಳ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಪಂಪಾಪತಿ ಹಾಗೂ ವೆಂಕಟರಾಮಯ್ಯನವರು ಇಲ್ಲಿ ಈ ಬಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಟೆಕ್ಸ್‌ಟೈಲ್ ಮಿಲ್‌ಗಳ ೧೫, ೨೦ ಸಾವಿರ ಕಾರ್ಮಿಕರಿಗೆ ಆಗಿರತಕ ತೊಂದರೆ ಬಗ್ಗೆ ಸರ್ಕಾರಕ್ಕೂ ಕೂಡಾ ಅರ್ಥವಾಗಿದೆ. ಆದರೆ ಇದು ಕೇವಲ ಒಂದು ಅಥವಾ ೨ ವರ್ಷಗಳಿಂದ ಆಗಿರತಕ್ಕದ್ದು ಅಲ್ಲ. ಇದರ ಕಾರಣವನ್ನು ವಿಶ್ಲೇಷಣೆ ಮಾಡಬೇಕೆಂದರೆ ಬಹಳ ಸಮಯ ಬೇಕಾಗುತ್ತದೆ. ಇದಕ್ಕೆ ಹಣಕಾಸಿನ ತೊಂದರೆ ಕಾರ್ಮಿಕರ ತೊಂದರೆ ಈ ಪ್ರಕಾರ ಅನೇಕ ತೊಂದರೆ ಗಳು ಇವೆ. ಈ ಬಗ್ಗೆ ಅನೇಕ ಕಾರಣಗಳು ಇರುವ ಈವತ್ತಿನ ಪರಿಸ್ಥಿತಿಯಲ್ಲಿ ಮಾನ್ಯ ಪಂಪಾಪತಿ ಯವರು ಏನೂ ಇಲ್ಲಿ ಸರ್ಕಾರವೇ ಇಲ್ಲವೇ, ಸರ್ಕಾರ ಕರೆದರೆ ಮಾಲೀಕರು ಬರುವುದೇ ಇಲ್ಲ ಎಂದು ಹೇಳಿದ್ದಾರೆ. ಆದರೆ ಪುಪಾಪತಿಯವರಿಗೇ ಗೊತ್ತಿದೆ. ಇವರ ಒಂದು ನೇತೃತ್ವದಲ್ಲಿ ಗಣೇಶ ಟೆಕ್ಸ್ ಟೈಲ್ ಮಿಲ್ ಸೆಟಲ್ ಆಗಿರುವುದು ಇವರಿಗೆ ಗೊತ್ತಿದೆ. ಆದ್ದರಿಂದ ಸರ್ಕಾರ ಏನು ಶಕ್ತಿದೆಯೇ ಸೆಟಲ್ ಮಾಡುವುದಕ್ಕೆ ಸರ್ಕಾರ ಏನೂ ಮಾಡೇ ಇಲ್ಲ ಎಂದು ಅವರು ಹೇಳುವುದು ಸತ್ಯಕ್ಕೆ ದೂರವಾ ಗಿರತಕ್ಕ ವಿಚಾರವಾಗಿದೆ. ಸರ್ಕಾರ ಸೆಟಲ್ ಮಾಡುವುದಕ್ಕೆ ಆದಷ್ಟು ಪ್ರಯತ್ನ ಮಾಡುತ್ತಿದೆ. ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್ಸ್ ಬಗ್ಗೆ ಕೂಡಾ ತಮಗೆ ಗೊತ್ತಿರುವ ಹಾಗೆ ಈಗಾಗಲೇ ಸೆಟಲ್‌ಮೆಂಟ್ ರೆಡಿ ಇರತಕ್ಕದ್ದು ತಮಗೇ ಗೊತ್ತಿದೆ. ಮತ್ತೆ ಚಿಟಗೇರಿ ಮಿಲ್ಸ್ ಕ್ಲೋಷರ್ ಮಾಡುವುದಕ್ಕೆ ಕ್ಲೋಷರ್ ಸೆಟಲ್‌ಮೆಂಟ್‌ಗೆ ತಾವು ಸಹಿ ಹಾಕಿದ್ದೀರಿ. ಆದುದರಿಂದ ಈ ೧೨ ಮಿಲ್‌ಗಳು ಏನಿವೆ ಇವುಗಳಲ್ಲಿ ಗಣೇಶ, ಸಿದ್ದೇಶ್ವರ ಹಾಗೂ ಚಿಗಟೇರಿಗಳ ಬಗ್ಗೆ ಪ್ರಾಬ್ಲಮ್ ಆಲ್ರೆಡ್ಡಿ ಸಾಲ್ವ್ ಆಗಿದೆ ಎಂದು ಹೇಳಬಹುದು. ಆಂಜನೇಯ ಕಾಟನ್ ಮಿಲ್ಸ್ ಮತ್ತು ಶಂಕರ್ ಟೆಕ್ಸ್‌ಟೈಲ್ ಮಿಲ್ಸ್ ಹಣ ಕಾಸಿನ ತೊಂದರೆಯಿಂದಾಗಿ ಮುಚ್ಚಿರತಕ್ಕದ್ದನ್ನು ತಾವು ಕೂಡಾ ಒಪ್ಪಿಕೊಳ್ಳುತ್ತೀರಿ. ಇವಕ್ಕೆ ಯಾವ ರೀತಿಯಲ್ಲಿ ಹಣಕಾಸಿನ ಸೌಕರ್ಯವನ್ನು ಒದಗಿಸಬೇಕೆಂಬುದನ್ನು ಪರಿಶೀಲಿಸುತ್ತಿದ್ದೇವೆ. ಸಹಕಾರಿ ಕ್ಷೇತ್ರದಲ್ಲಿರತಕ್ಕ ಬಳ್ಳಾರಿ, ಬಿಜಾಪುರ ರಾಯಚೂರು ಹಾಗೂ ಬಂಗಲೆಕೋಟೆಯಲ್ಲೀತಕ್ಕವು ಮುಖ್ಯವಾಗಿ ಹಣಕಾಸಿನ ತೊಂದರೆಯಿಂದಾಗಿ ಮುಚ್ಚಿವೆ. ಈ ಬಗ್ಗೆ ಸ್ವಲ್ಪ ಪ್ರಯತ್ನ ಮಾಡಿದರೆ, ಈಗಿರತಕ್ಕ ಪ್ರಯತ್ನಕ್ಕೆ ಸ್ವಲ್ಪ ಹೆಚ್ಚಿನ ಪ್ರಯತ್ನ ಮಾಡಿದರೆ ಇವುಗಳ ಸಮಸ್ಯೆಯನ್ನೂ ಕೂಡಾ ಬಗೆಹರಿಸಬಹುದು ಎಂದು ಹೇಳುತ್ತೇನೆ. ಇನ್ನು ಮಿನರ್ವ ಮಿಲ್‌ನ ವಿಷಯ ಹೈಕೋರ್ಟಿನಲ್ಲಿ ಇರುವುದರಿಂದ ಅಲ್ಲಿಯ ನಿರ್ಣಯ ಏನು ಬರುತ್ತದೋ ಅದರ ಮೇಲೆ ಯೋಚನೆ ಮಾಡಬೇಕಾಗುತ್ತದೆ. ಮತ್ತೆ ಎಂ.ಎಸ್.ಕೆ. ಮಿಲ್ ಬಗ್ಗೆ ಕೇಂದ್ರದ ಸಚಿವರು ೩-೪ದಿವಸಗಳ ಹಿಂದೆ ಪತ್ರಿಕೆಯಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸೂಕ್ತ ರೀತಿಯಲ್ಲಿ ಕೇಂದ್ರದ ಮಂತ್ರಿಗಳ ಜೊತೆಯಲ್ಲಿ ವ್ಯವಹಾರ ಮಾಡಬೇಕಾಗಿರುವುದು ರಿಂದ ಸರ್ಕಾರ ಈ ಬಗ್ಗೆ ಪರಿಶೀಲನೆ ಮಾಡತ್ತದೆ. ಇನ್ನು ಕೆ.ಆರ್.ಮಿಲ್ಸ್ ವಿಷಯ ಬಿ.ಐ.ಎಫ್.ಆರ್ ಮುಂದೆ ಇದೆ ಎನ್ನುವುದು ತಮಗೆ ಗೊತ್ತೇ ಇದೆ. ಮತ್ತೆ ಮುಚ್ಚಿರತಕ್ಕ ಕಾರ್ಖಾನೆಯಲ್ಲಿ ಕೆಲಸ

ಮಾಡತಕ್ಕ ಕಾರ್ಮಿಕರಿಗೆ ಇ ಎಸ್.ಐ. ಸೌಲಭ್ಯವನ್ನು ತಾತ್ಕಾಲಿಕವಾಗಿ ಒದಗಿಸಲು ಸಾಧ್ಯವೇ ಎಂದು ಕೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತದೆ. ಆ ಭರವಸೆಯನ್ನು ನಾನು ಕೊಡುತ್ತೇನೆ. ಉಳಿದಿರತಕ್ಕ ಮುಚ್ಚಿರುವ ಟೆಕ್ಸ್‌ಟೈಲ್ ಮಿಲ್‌ಗಳನ್ನು ಪ್ರಾರಂಭ ಮಾಡಬೇಕು. ಅವನ್ನು ಯಾವ ರೀತಿ ಪ್ರಾರಂಭ ಮಾಡಬೇಕು ಎನ್ನುವ ಬಗ್ಗೆ ನವೆಂಬರ್ ಸಭೆ ಸೇರಿದ ಸಂಪುಟದ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮುಖ್ಯಮಂತ್ರಿಯವರು ನೇಮಕ ಮಾಡಿದ್ದಾರೆ. ಸಬ್ ಕಮಿಟಿ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ಯಾವ ರೀತಿ ಪ್ರಯತ್ನ ಮಾಡಬೇಕು ಎನ್ನುವ ಬಗ್ಗೆ ಯಾವರೀತಿ ಹಣಕಾಸನ್ನು ಒದಗಿಸಬೇಕು ಎನ್ನುವ ಬಗ್ಗೆ ವಿಚಾರ ಮಾಡುತ್ತದೆ. ಈ ಕಾರ್ಮಿಕರ ಬಗ್ಗೆ ಈ ಸದನದ ಸದಸ್ಯರಿಗೆ ಯಾವ ರೀತಿಯ ಕಾಳಜಿ ಇದೆಯೋ ಅಷ್ಟೇ ಕಾಳಜಿ ಮತ್ತು ಅನುಕಂಪ ಕಾರ್ಮಿಕವರ್ಗದವರ ಬಗ್ಗೆ ಸರ್ಕಾರಕ್ಕೂ ಕೂಡಾ ಇದೆ. ಆದರೆ ಇದಕ್ಕೆ ಅನೇಕ ಕಾರಣಗಳಿವೆ ಇದು ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಆಗಿರತಕ್ಕದ್ದು ಅಲ್ಲ. ಇವತ್ತಿನ ಟೆಕ್ಸ್‌ಟೈಲ್ ಮಿಲ್‌ಗಳ ಪಾಲಿಸಿ ಏನು? ಅದರಿಂದ ಆಗಿರತಕ್ಕ ತೊಂದರೆಯೇನು? ಇವೆಲ್ಲದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ, ಸಮಗೆಲ್ಲರಿಗೂ ನೋವಾಗಿದೆ ಮೊದಲಿನಿಂದ ಆಗಿರತಕ್ಕ ತೊಂದರೆಯಿಂದ. ನೇಣು ಹಾಕಿಕೊಂಡು ಸತ್ತಿರತಕ್ಕದ್ದು ಇದೆಲ್ಲ ಅರ್ಥವಾಗಿದೆ. ಇದನ್ನು ತಿಳಿದುಕೊಂಡು ಸರ್ಕಾರ ನಿದ್ದೆ ಮಾಡುತ್ತಿಲ್ಲವೆಂಬುದೂ ತಮಗೆ ಗೊತ್ತಿದೆ. ಸೆಟಲ್‌ಮೆಂಟ್‌ಗಳನ್ನು ಸಾಕಷ್ಟು ಮಾಡಿರತಕ್ಕದ್ದು ಸಹ ತಮಗೆ ಗೊತ್ತಿದೆ. ಆದ್ದರಿಂದ ಮಾನ್ಯ ಸದಸ್ಯರುಗಳಿಗೆ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕೊಡುತ್ತೇನೆ ಏನೆಂದರೆ ಈ ಬಗ್ಗೆ ಸಚಿವ ಸಂಪುಟದ ಸಬ್ ಕಮಿಟಿ ಮಾಡಲಾಗಿದೆ. ಆದಷ್ಟು ಬೇಗ ಆ ಸಬ್ ಕಮಿಟಿ ರಿಪೋರ್ಟ್‌ಕೊಡುತ್ತದೆ ತಾತ್ಕಾಲಿಕವಾಗಿ ಕಾರ್ಮಿಕರಿಗೆ ಇಎಸ್‌ಐನಿಂದ ಸೌಲಭ್ಯವನ್ನು ಕೊಡಿಸಬೇಕೆಂದು ಕೇಳಿದ್ದಾರೆ. ಇಎಸ್‌ಐ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಂಟಿ ಸಂಸ್ಥೆ. ಮುಂದೆ ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳತ್ತೇನೆ. ಮಾನ್ಯ ಸದಸ್ಯರಾದ ವಿಕಾಂತಯ್ಯನವರು ಚಿತ್ರದುರ್ಗ ಹಾಗೂ ದಾವಣಗೆರೆ ತಾಲ್ಲೂಕುಗಳಿಗೆ ಸಂಬಂಧಪಟ್ಟ ಟೆಕ್ಸ್‌ಟೈಲ್ಸ್‌ನ ಕಾರ್ಮಿಕರನ್ನು ಮತ್ತು ಆಡಳಿತ ವರ್ಗದವರನ್ನು ಕರೆಸಿ ಸರ್ಕಾರ ಮಾತುಕತೆ ಮಾಡಬೇಕೆಂದು ಹೇಳಿದ್ದಾರೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಒಂದು ಸಭೆಯನ್ನು ಕರೆಯಲಿಕ್ಕೆ ಪ್ರಯತ್ನ ನಾಡುತ್ತೇನೆ. ಒಟ್ಟನಲ್ಲಿ ಹೇಳುವುದಾದರೆ ನಾವು ಕಾರ್ಮಿಕ ವರ್ಗದ ಬಗ್ಗೆ ಸಾಕಷ್ಟು ಅನುಕಂಪ ಹೊಂದಿ ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರುಗಳಿಗೆ ತಮ್ಮ ಮೂಲಕ ಕೊಡುತ್ತೇನೆ,

ಶ್ರೀಮತಿ ಕೆ ಎಸ್, ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಮುಖ್ಯವಾದ ಪ್ರಶ್ನೆಗೆ ಮಂತ್ರಿಗಳಿಂ ಉತ್ತರ ಕೊಡುತ್ತಿದ್ದುದರಿಂದ ನಾನು ಸುಮ್ಮನೆ ಕುಳಿತುಕೊಂಡಿದ್ದೆ. ಕೋರಂ ಇಲ್ಲದೆ ಸಭೆಯನ್ನು ನಡೆಸುವುದು ಪೀನ್ನಾಗಿರುವುದಿಲ್ಲ. ಅದು ಇಲ್‌ಲೀಗಲ್ ಆಗುತ್ತದೆ.

ಅಧ್ಯಕ್ಷರು.—ಏನು ಮಾಡಬೇಕು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಮಾಡಬೇಕೆಂದರೆ, ಇಲ್‌ಲೀಗಲ್ ಆಗಿ ಕೆಲಸ ಮಾಡಬೇಕೆ ?

ಅಧ್ಯಕ್ಷರು.—ಆಡಳಿತ ಪಕ್ಷದ ವಿರೋಧಪಕ್ಷದ ಇಬ್ಬರ ಸಲಹೆಯೂ ಈಗ ನನಗೆ ಬೇಕು.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.—ಪ್ರಿವಿಲೇಜ್ ಮೋಷನ್‌ಗಳು ಬಿಲ್‌ಗಳು ಇವೆ. ನಾವು ರಾತ್ರಿ ೧೨ ಗಂಟೆಯವರೆಗೆ ಕುಳಿತುಕೊಳ್ಳಲಿಕ್ಕೆ ತಯಾರಾಗಿದ್ದೇವೆ. ಆದರೆ ಇಲ್‌ಲೀಗಲ್ ಆಗಿಯೂ ಸಭೆ ನಡೆಸುತ್ತೇವೆಂದರೆ ಅದು ನಿಮಗೆ ಬಿಟ್ಟಿದ್ದು.

ಅಧ್ಯಕ್ಷರು.—ಕೋರಂ ಇಲ್ಲ ಅಂದರೆ ಸಭೆಯನ್ನು ಮುಂದಕ್ಕೆ ಹಾಕೋಣ,

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ.—ಸಭೆಯನ್ನು ಮುಂದಕ್ಕೆ ಹಾಕಿ, ನಾನು ಹೇಳತಕ್ಕದ್ದು ಕಾರ್ಯ ಕಲಾಪಗಳನ್ನು ಮುಗಿಸಲಿಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಕಾರ್ಯಕ್ರಮದ ಪ್ರಕಾರ ರೆವಿನ್ಯೂ ಇಲಾಖೆಗೆ ಸೇರಿದ ಬಿಲ್ ಇದೆ. ಈಗ ಕೊಟ್ಟ ಉತ್ತರಕ್ಕೆ ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಯು. ಭೂಪತಿ.—ಟೆಲಿಫೋನ್ ಟ್ಯಾಪಿಂಗ್‌ನ ಪ್ರಿವಿಲೇಜ್ ಮೋಷನ್ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಆಗ ಎಲ್ಲಾ ಸದಸ್ಯರು ಓಡಿ ಬಂದು ಇಲ್ಲಿ ಕುಳಿತುಕೊಳ್ಳುತ್ತಾರೆ.

ಶ್ರೀ ರಾಜವರ್ಧನ್ (ಸರ್ಕಾರಿ ಮುಖ್ಯ ಸಚೇತಕರು).—ಬೆಳಿಗ್ಗೆ ೯ ಗಂಟೆಯಿಂದ ಸದಸ್ಯರೆಲ್ಲರೂ ಕಂಳಿತಿದ್ದರು, ಆದಕ್ಕೋಸ್ಕರ ಹೇಗೆ ಇಲ್ಲೇ ಇರಿ ಎಂದು ಹೇಳುವುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಬೆಳಿಗ್ಗೆಯಿಂದ ನಿಮ್ಮ ಕಡೆಯವರು ಮಾತ್ರ ಅಲ್ಲ, ನಾವು ಇಲ್ಲೇ ಇದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಊಟಕ್ಕಾದರೂ ವ್ಯವಸ್ಥೆ ಮಾಡಿಸಿದ್ದರೆ ಎಲ್ಲರೂ ಇರುತ್ತಿದ್ದರು, ನಿಮಗೆ ಊಟ ಹಾಕಿಸುತ್ತೇವೆ, ಟೀ ಕೊಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಬೆಳಿಗ್ಗೆಯಿಂದ ಆಪರ ಮುಖವೇ ಕಾಣಿಸುತ್ತಿಲ್ಲ.

ಅಧ್ಯಕ್ಷರು.—ಕೋರಂಗೆ ೨೩ಜನ ಸದಸ್ಯರು ಇರಬೇಕು, ಈಗ ೨೧ಜನ ಮಾತ್ರ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ಈಗ ೨೧ಜನ ಸದಸ್ಯರಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏಕೆ ಹೇಳುತ್ತಿದ್ದೇನೆ ಎಂದರೆ ನಾವು ಇನ್ನೂ ಅನೇಕ ಕಾರ್ಯಕಲಾಪಗಳನ್ನು ನಡೆಸಬೇಕಾಗಿದೆ. ಇದು ಸರ್ಕಾರಕ್ಕೆ ಗೊತ್ತಿದೆ, ಆದರೆ ಇವತ್ತಿನ ದಿವಸ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಕೂಡ ಇಲ್ಲ.

ಶ್ರೀ ರಾಜವರ್ಧನ್.—ಅವರು ಮೇಲ್ಮನೆಯಲ್ಲಿದ್ದಾರೆ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ೧೦ ಜನ ಇದ್ದರೆ ಇವರು ೨೦ಜನರಾದರೂ ಇರಬೇಕು ಅಷ್ಟಾದರೂ ಇದ್ದರೆ ಪರವಾಗಿಲ್ಲ. ಲೋಕಸಭೆಯಲ್ಲಿ ಹೀಗೆ ಇಲ್ಲ, ಆಡಳಿತ ಪಕ್ಷದವರು ಜಾಸ್ತಿ ಇದ್ದೇ ಇರುತ್ತಾರೆ, ಆದರೆ ಇಲ್ಲಿ ವಿರೋಧಪಕ್ಷದವರು ಜಾಸ್ತಿ ಇದ್ದಾರೆ. ಆಡಳಿತ ಪಕ್ಷದವರು ಕಡಿಮೆ ಇದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ೨೨ಜನ ಇದ್ದರೆ ಸಾಕು ಎಂದು ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹತ್ತು ನಿಮಿಷ ಅಡ್ಜರ್ನ್ ಮಾಡಿ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿ. ಆಗ ನೋಡಿ ಎಲ್ಲರೂ ಓಡಿಬರುತ್ತಾರೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕಂಳಿತುಕೊಳ್ಳಿ. ಆವರಿಗೂ ಸಾಕಾಗಿದೆ, ನಿಮಗೂ ಸಾಕಾಗಿದೆ, ಎಲ್ಲರಿಗೂ ಸಾಕಾಗಿದೆ. ಸ್ವಲ್ಪ ಕಾದು ನೋಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ. ಐದು ನಿಮಿಷ ಅಡ್ಜರ್ನ್ ಮಾಡಿ ಆಮೇಲೆ ಟೆಲಿಫೋನ್ ಟ್ಯಾಪಿಂಗ್ ವಿಷಯ ತೆಗೆದುಕೊಳ್ಳುತ್ತೇನೆ ಎಂದು ನೀವು ಹೇಳಿದರೆ ಸಾಕು, ಮುಖ್ಯ ಮಂತ್ರಿಗಳೂ ಬರುತ್ತಾರೆ ಎಲ್ಲರೂ ಓಡಿಬರುತ್ತಾರೆ,

ಶ್ರೀ ರಾಜವರ್ಧನ್.—ಈ ನಿಮಿಷ ಸಭೆಯನ್ನು ಮುಂದೂಡಿದರೆ ಈಗಿರುವವರೆಲ್ಲ ಹೋಗಿಬಿಡುತ್ತಾರೆ.

ಅಧ್ಯಕ್ಷರು.—ಇರಿ, ಮತ್ತೊಮ್ಮೆ ಎಣಿಸೋಣ, (ಸದಸ್ಯರನ್ನು ಎಣಿಸಿ) ಇಲ್ಲಿ ಅವರು ೯ ಜನ ಮಂತ್ರಿ ನೀವು ೯ಜನ ಇದ್ದೀರಿ, ಇಬ್ಬರೂ ಸಮಸಮ ಇದ್ದೀರಿ, ಇವರು ಮೂವರು ಸೇರಿದರೆ ಒಟ್ಟು ೨೧ ಆಯಿತು.

ಶ್ರೀ ಮಲ್ಲಿಕಾರ್ಜುನ ಎಂ, ಖರ್ಗೆ. ಐದು ನಿಮಿಷ ಅಡ್ಜರ್ನ್ ಮಾಡಿ. ಟೆಲಿಫೋನ್ ಟ್ಯಾಪಿಂಗ್ ವಿಷಯ ಬರಲಿ. ಎಲ್ಲರೂ ಬರುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಯಾರ್ಯಾರು ರೂಮುಗಳಲ್ಲಿ ಇದ್ದಾರೆ, ಅವರನ್ನು ಕರೆಸಿ. ನಾವು ಸಮ್ಮವರನ್ನು ಕರೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನೀವು ನಿಮ್ಮವರನ್ನು ಕರೆಸುವುದಕ್ಕೆ ಪ್ರಯತ್ನ ಮಾಡಿ. It is not befetting to the House, if we adjourn the House for want of quorum at the end of the last day of the session.

ಶ್ರೀ ಬಿ. ಎ. ಉಮಾರಬ್ಬ.—ಎಲ್ಲರೂ ಮಿನಿಸ್ಟರ್ ಆಗುವುದಕ್ಕೆ ಕ್ಯೂನಲ್ಲಿ ನಿಂತಿದ್ದಾರೆ. ಅಲ್ಲಿಗೆ ಹೋಗಿ ಕರೆಸಿ. They are all waiting for a berth in the Expansion of Ministry...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಚೀಫ್ ಮಿನಿಸ್ಟರ್ ಛೇಂಬರ್‌ನಲ್ಲಿ ಡಿಸ್ಟ್ರಿಕ್ಟ್ ವೈಸ್ ಮಿನಿಸ್ಟರ್ಸ್ ಮಾಡುತ್ತಾರೆ ಎಂದು ಡಿಸ್ಟ್ರಿಕ್ಟ್ ವೈಸ್ ಮಿನಿಸ್ಟರ್‌ಗಳೆಲ್ಲ ಹೋಗಿದ್ದಾರೆ. ಅವರನ್ನು ಕರೆಸಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಡೆವಲಪ್‌ಮೆಂಟ್ ವರ್ಕ್ಸ್ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಅದಕ್ಕೆ ಎಲ್ಲರೂ ಹೋಗಿದ್ದಾರೆ. ಮಂತ್ರಿಗಳಾಗುವುದಕ್ಕೆ ಅಲ್ಲ.

ಶ್ರೀ ಬಿ. ಎ. ಉಮಾರಬ್ಬ.—ದಸರಾ ಮೊದಲೇ ಸಚಿವ ಸಂಪುಟ ವಿಸ್ತರಣೆ ಮಾಡುತ್ತಾರೆ ಅಂತ ಎಲ್ಲರಿಗೂ ಲಾಸ್ಟ್ ಚಾನ್ಸ್ ನೋಡಿ,

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೆ ಹಾಕಲಾಗಿದೆ.

(೮.೫೫ ಗಂಟೆಗೆ ಸಭೆಯಂ ಹತ್ತು ನಿಮಿಷಗಳಿಗಾಗಿ ಮುಂದೂಡಲ್ಪಟ್ಟಿತು)

(ಸಭೆಯು ೯–೦೮ ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸಭಾಪತಿಯವರೇ ಸಭೆಯಲ್ಲಿ ಕೋರಂ ಇಲ್ಲದೆ ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೂಡುವುದು ಸರಿಯಲ್ಲ. ತಾವು ದಯಮಾಡಿ ಸೋಮವಾರಕ್ಕೆ ಸಭೆಯನ್ನು ಮುಂದೂಡಿ. In my humble opinion, it offends the very dignity of this House, ಇದು ಒಳ್ಳೆಯದಲ್ಲ. When there is no quorum, it is not fit to adjourn sine-die. Let it be a lesson to the Government and to our people and to every one. You summon it on Monday.

Mr. Speaker.—I will hear Mr. Veeranna also.

ಶ್ರೀ ಬಿ. ಎ. ಉಮಾರಬ್ಬ.—ಸರ್ಕಾರಕ್ಕೆ ತಾವು ವಾರ್ನಿಂಗ್ ಕೊಡಿ.

Sri Veeranna.—I am going to convince the Chair that the House may be adjourned sine-die without insisting the quorum of the Members.

ಅಧ್ಯಕ್ಷರು.—ಕೋರಂ ಬಗ್ಗೆ ಯಾರೂ ಮಾತನಾಡುವುದು ಬೇಡ, ಇವತ್ತು ಅಧಿವೇಶನದ ಕೊನೆಯ ದಿವಸ ಈ ಕಡೆಯಲ್ಲಿ ಈಗ ೬ ಜನ ಇದ್ದೀರಿ, ಅವರಂ ೯ ಜನ ಇದ್ದಾರೆ. ನಾನು ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಅಡ್ಜರ್ನ್ ಮಾಡಿದ್ದೇನೆ. ತಮ್ಮೆಲ್ಲರಿಗೂ ಧನ್ಯವಾದಗಳು.

(ಸದನವು ೯ ಗಂಟೆ ೧ ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂಕ್ಕಾಯಂವಾಯಿತು)

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಂತ್ತದೆ.